# ಅಧ್ಯಕ್ಷರ ಮಾತು



ಗೌರವಾನ್ವಿತ ಸದಸ್ಯರುಗಳೇ,

ತಮಗೆಲ್ಲರಿಗೂ ಪ್ರೀತಿಯ ಸ್ವಾಗತ,

ನಮ್ಮ ಸಂಘ ಮಡಂತ್ಯಾರು ಕೃಷಿ ಪತ್ತಿನ ಸಹಕಾರಿ ಸಂಘವು ಕಳೆದ 55 ವರ್ಷಗಳ ಅವಧಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಈ ದಿನ ಸರ್ವ ಸದಸ್ಯರ 55ನೇ ಮಹಾಸಭೆಯನ್ನು ಕ್ರಮಬದ್ಧವಾಗಿ ನಡೆಸಿಕೊಳ್ಳಲು ತಮ್ಮೆಲ್ಲರ ಸಹಕಾರವನ್ನು ಬಯಸುತ್ತೇನೆ.

ನಮ್ಮ ಸಂಘದ ಪ್ರಸ್ತುತ ಆಡಳಿತ ಮಂಡಳಿಯ ಚುನಾವಣೆಯು ದಿನಾಂಕ 01–12–2024ರಂದು ನಡೆದಿದ್ದು, 03–03–2025ರಂದು ಅಧ್ಯಕ್ಷನಾಗಿ ನಾನು ಶ್ರೀ ಜೋಯಲ್ ಮೆಂಡೋನ್ಸ, ಉಪಾಧ್ಯಕ್ಷರಾಗಿ ಶ್ರೀ ಕಾಂತಪ್ಪ ಗೌಡರವರು ಮತ್ತು ನಿರ್ದೇಶಕರಾಗಿ ಶ್ರೀಮತಿ ಧನಲಕ್ಷ್ಮೀ, ಶ್ರೀಮತಿ ಅಮಿತಾ ಪ್ರಿಯ ಲೋಬೋ, ಶ್ರೀ ಗಣೇಶ್ ಮೂಲ್ಯ, ಶ್ರೀ ಮಹಾಬಲ ಕೆ., ಶ್ರೀ ಸುರೇಶ್ ಎಸ್., ಶ್ರೀ ಗೋಪಾಲಕೃಷ್ಣ ಕೆ. ಶ್ರೀ ಕುಮಾರ ನಾಯ್ಕ, ಶ್ರೀ ಕಿಶೋರ್ ಕುಮಾರ್, ಶ್ರೀ ಕೆ. ಅರವಿಂದ ಜೈನ್, ಶ್ರೀ ಪದ್ಮನಾಭ ಸಾಲ್ಯಾನ್ ಮತ್ತು ಶ್ರೀ ಸಿರಾಜುದ್ದೀನ್ ಹೀಗೆ ಒಟ್ಟು ಹದಿಮೂರು ಮಂದಿ ಒಳಗೊಂಡ ಆಡಳಿತ ಮಂಡಳಿಯು ಅಸ್ತಿತ್ವಕ್ಕೆ ಬಂದಿರುತ್ತದೆ.

ಸಂಘವು 2024–25ನೇ ಆರ್ಥಿಕ ವರ್ಷದಲ್ಲಿ ಉತ್ತಮ ವ್ಯವಹಾರ ನಡೆಸಿ ಅತ್ಯುತ್ತಮ ಲಾಭ ಗಳಿಸಿದೆ ಮತ್ತು ಲೆಕ್ಕಪರಿಶೋಧನೆಯಲ್ಲಿ ಸಂಘವನ್ನು 'ಎ' ವರ್ಗಕ್ಕೆ ವರ್ಗೀಕರಿಸಲಾಗಿದೆ ಎಂದು ತಿಳಿಸಲು ಸಂತೋಷ ಪಡುತ್ತೇನೆ. 2024–25ನೇ ಸಾಲಿನ ಆರ್ಥಿಕ ವರ್ಷದ ಅಂತ್ಯಕ್ಕೆ 'ಎ' ವರ್ಗದಲ್ಲಿ 5345, 'ಸಿ' ವರ್ಗದಲ್ಲಿ 7389 ಮತ್ತು 'ಡಿ' ವರ್ಗದಲ್ಲಿ 239 ಹೀಗೆ ಒಟ್ಟು 12,923 ಸದಸ್ಯರಿದ್ದು, ರೂ. 125.59 ಕೋಟಿ ದುಡಿಯುವ ಬಂಡವಾಳ ಹೊಂದಿರುತ್ತದೆ. ಆರ್ಥಿಕ ವರ್ಷದಲ್ಲಿ ರೂ. 455.79 ಕೋಟಿ ವ್ಯವಹಾರ ನಡೆಸಿ ವರ್ಷಾಂತ್ಯಕ್ಕೆ ಶೇ.97 ಸಾಲ ವಸೂಲಾತಿಯನ್ನು ಮಾಡಿ 2024–25ನೇ ಆರ್ಥಿಕ ವರ್ಷದಲ್ಲಿ ಒಂದು ಕೋಟಿ ಅರವತ್ತೆರಡು ಲಕ್ಷದ ಐವತ್ತೈದು ಸಾವಿರದ ಏಳ್ನೂರ ಐವತ್ತಾರು ರೂಪಾಯಿ ಎಂಬತ್ನಾಲ್ಕು ಪೈಸೆ (1,62,55,756.84) ಲಾಭ ಗಳಿಸಿದೆ.

ಈ ಸಾಧನೆಗೆ ಬೆನ್ನೆಲುಬಾಗಿರುವ ಸಂಘದ ಸದಸ್ಯರು, ಪ್ರಾಮಾಣಿಕ ಸಿಬ್ಬಂದಿಗಳು, ಅತ್ಯುತ್ತಮ ಆಡಳಿತ ಮಂಡಳಿ ಮತ್ತು ಹಿತೈಷಿಗಳ ಆಶೀರ್ವಾದಗಳಿಂದ ಈ ಯಶಸ್ಸನ್ನು ಗಳಿಸಲು ಸಾಧ್ಯವಾಯಿತು ಎಂದು ಹೇಳಲು ಹೆಮ್ಮೆ ಪಡುತ್ತೇನೆ. ಈ ಸಾಧನೆಯಲ್ಲಿ ದೊರೆತ ಯಶಸ್ಸನ್ನು ಸಂಘದ ಎಲ್ಲಾ ಸದಸ್ಯರುಗಳಿಗೆ ಅರ್ಪಿಸುತ್ತೇನೆ. ಆಡಳಿತ ಮಂಡಳಿ ಶಿಫಾರಸ್ಸು ಮಾಡಿದಂತೆ ಈ ಕೆಳಗೆ ಕಾಣಿಸಿದ ಪ್ರಕಾರ ಕಳೆದ ಆರ್ಥಿಕ ವರ್ಷದಲ್ಲಿ ಗಳಿಸಿದ ಲಾಭಾಂಶವನ್ನು ಘೋಷಣೆ ಮಾಡುತ್ತೇನೆ.

| | | | | |
|---|---|---|---|---|
| 1 | ಕ್ಷೇಮ ನಿಧಿ | 25% | ರೂ. | 4063939.21 |
| 2 | ಸಹಕಾರ ಶಿಕ್ಷಣ ನಿಧಿ | 2% | ರೂ. | 243836.35 |
| 3 | ಕಟ್ಟಡ ನಿಧಿ | 25% | ರೂ. | 2986995.32 |
| 4 | ಸದಸ್ಯರ ಸಹಾಯ ನಿಧಿ | 5% | ರೂ. | 448049.30 |
| 5 | ಸಿಬ್ಬಂದಿ ಕಲ್ಯಾಣ ನಿಧಿ | 5% | ರೂ. | 425646.83 |
| 6 | ಅನುತ್ಪಾದಕ ಆಸ್ತಿ ನಿಧಿ | 1% | ರೂ. | 80872.90 |
| 7 | ಧರ್ಮಾರ್ಥ ನಿಧಿ | 12% | ರೂ. | 960770.03 |
| 8 | ಸಿಬ್ಬಂದಿಗಳಿಗೆ ಬೋನಸ್ | | ರೂ. | 1104794.00 |
| 9 | ಸದಸ್ಯರಿಗೆ ಡಿವಿಡೆಂಡ್ | 14% | ರೂ. | 5540234.00 |
| 10 | ಕ್ಷೇಮ ನಿಧಿ (ಉಳಿಕೆ) | | | 400618.00 |
| | ಒಟ್ಟು ಮೊತ್ತ | | **ರೂ.** | **1,62,55,756.84** |

ವಿಶೇಷವಾಗಿ **865** ಕೃಷಿಕ ಸದಸ್ಯರುಗಳಿಗೆ ಬೆಳೆ ಸಾಲ ಒದಗಿಸಲಾಗಿದ್ದು, ಎಮ್.ಕೆ.ಸಿ.ಸಿ. ಮತ್ತು ಎಮ್.ಟಿ.ಎ.ಪಿ. ಸಾಲವನ್ನು ಗರಿಷ್ಠ ಪ್ರಮಾಣದಲ್ಲಿ ನೀಡಿ ಕೃಷಿಕರ ಪ್ರಗತಿಗೆ ಒತ್ತು ನೀಡಿ ಅವರನ್ನು ಆರ್ಥಿಕವಾಗಿ ಸದೃಢಗೊಳಿಸಿ ಸ್ವಾವಲಂಬಿಯನ್ನಾಗಿಸಲು ನಮ್ಮ ಸಂಘವು ಕಟಿಬದ್ಧವಾಗಿದೆ ಎನ್ನುವುದಕ್ಕೆ ಯಾವುದೇ ಸಂಶಯವಿಲ್ಲ.

ಅದಲ್ಲದೆ ನಮ್ಮ ಪ್ರತಿಷ್ಠಿತ ಮಾತೃಸಂಸ್ಥೆ ಡಿ.ಸಿ.ಸಿ. ಬ್ಯಾಂಕ್‌ನಲ್ಲಿ ರೂ. **31.48** ಕೋಟಿ ನಿರಖು ಠೇವಣಿಯಲ್ಲಿ ಹಾಗೂ ರೂ. **86.03** ಲಕ್ಷ ವಿವಿಧ ಷೇರುಗಳಲ್ಲಿ ವಿನಿಯೋಗಿಸಿದ್ದು ಹಾಗೂ ರೂ. **9.57** ಕೋಟಿ ನಿಧಿಗಳನ್ನು ಹೊಂದಿ ಸಂಘವು ಸದೃಢವಾಗಿದೆ.

ವ್ಯಾಪಾರ ವ್ಯವಹಾರದಲ್ಲಿ ರೂ. **6.84** ಲಕ್ಷ ಲಾಭ ಗಳಿಸಿದ್ದು, ಸುಮಾರು **720** ಬೆಳೆಸಾಲ ಪಡೆದ ರೈತ ಸದಸ್ಯರನ್ನು ವೈಯಕ್ತಿಕ ಅಪಘಾತ ವಿಮೆಯಲ್ಲಿ ಉಚಿತವಾಗಿ ನೋಂದಾಯಿಸಲಾಗಿದ್ದು, ಸದಸ್ಯರ ಸಹಾಯ ನಿಧಿಯಿಂದ **23** ಮಂದಿ ಸದಸ್ಯರಿಗೆ ರೂ. **1,82,000**ವನ್ನು ಆರ್ಥಿಕ ಧನಸಹಾಯ ನೀಡಿ ಅವರ ಆರ್ಥಿಕ ಅಡಚಣೆಗೆ ಸ್ಪಂದಿಸಿದ್ದೇವೆ. ಈ ಸಂದರ್ಭದಲ್ಲಿ ನನ್ನೊಂದಿಗೆ ಶ್ರಮಿಸಿದ ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರಿಗೆ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಮತ್ತು ಸಿಬ್ಬಂದಿ ವರ್ಗಕ್ಕೆ ನಾನು ಆಭಾರಿಯಾಗಿದ್ದೇನೆ.

ಸಂಘದ ವತಿಯಿಂದ ಗ್ರಾಹಕರ ಆರ್ಥಿಕ ವ್ಯವಹಾರಕ್ಕೆ ಅನುಕೂಲವಾಗುವ ದೃಷ್ಟಿಯಿಂದ ಈಗಾಗಲೇ NEFT ಮತ್ತು RTGS ಸೇವೆಗಳ ಸೌಲಭ್ಯಗಳನ್ನು ಕಲ್ಪಿಸಿದ್ದು, ಸಾಲದ ಬೇಡಿಕೆಗೆ ಅನುಗುಣವಾಗಿ ಕೃಷಿಯೇತರ ಸಾಲಗಳನ್ನು ಅತೀ ಶೀಘ್ರವಾಗಿ ನೀಡುತ್ತೇವೆ. ಕೃಷಿ ಸಾಲ ಪಡೆದಿರುವ ರೈತ ಸದಸ್ಯರುಗಳಿಗೆ ಆಭರಣ ಈಡು ಮತ್ತು ವಾಹನ ಸಾಲಗಳ ಮೇಲಿನ ಬಡ್ಡಿದರ ಶೇಕಡಾ 1 ಕಡಿಮೆಯಲ್ಲಿ ನೀಡುತ್ತ ಇದ್ದು, ರೈತ ಸದಸ್ಯರು ಇದರ ಸದುಪಯೋಗವನ್ನು ಪಡೆದುಕೊಳ್ಳಬಹುದು. ಚಿನ್ನಾಭರಣ ವಿಶೇಷ ಸಾಲ ಸೌಲಭ್ಯ ಲಭ್ಯವಿದ್ದು ಅತೀ ತ್ವರಿತ ಮೂರು ತಿಂಗಳು, ತ್ವರಿತ ಆರು ತಿಂಗಳು, ವಾರ್ಷಿಕ ಅವಧಿಯ ಗರಿಷ್ಠ ಸಾಲ ನೀಡಲಾಗುತ್ತದೆ. ಸದಸ್ಯರು ಇದರ ಸದುಪಯೋಗವನ್ನು ಪಡೆದುಕೊಳ್ಳಬಹುದು.

### ಯೋಜನೆಗಳು

ನಮ್ಮ ಸಂಘದ ಪ್ರಸ್ತುತ ಆಡಳಿತ ಮಂಡಳಿಯು ನಿರ್ಣಯಿಸಿದಂತೆ ಈ ಕೆಳಗಿನ ಯೋಜನೆಗಳನ್ನು ಹಮ್ಮಿಕೊಂಡಿದ್ದೇವೆ.

1. ಸಂಘದ ಸದಸ್ಯರಿಗೆ ದಿನಾಂಕ 13-07-2025ರಂದು ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಏರ್ಪಾಡಿಸಲಾಗುವುದು. (ಇದರ ಸವಿವರವನ್ನು ಇದೇ ನೋಟೀಸಿನಲ್ಲಿ ಅಂತಿಮ ಪುಟದಲ್ಲಿ ಮುದ್ರಿಸಲಾಗಿದೆ)
2. ಸಂಘದ ವತಿಯಿಂದ ನೀಡುವ ಪಡಿತರವನ್ನು ಜನರಿಗೆ ಅನುಕೂಲವಾಗುವಂತೆ ಬೆಳಗ್ಗೆ 9:00 ಗಂಟೆಯಿಂದ ರಾತ್ರಿ 8:00 ಗಂಟೆ ತನಕ ವಿತರಿಸುವುದು ಎಂದು ನಿರ್ಣಯಿಸಲಾಗಿದೆ.
3. ಸಂಘದ ವ್ಯಾಪ್ತಿಯಲ್ಲಿ ಬರುವ ಸದಸ್ಯರ ಮಕ್ಕಳು ಶೈಕ್ಷಣಿಕ/ಕ್ರೀಡೆಯಲ್ಲಿ ಅಥವಾ ಇನ್ನಿತರ ವಿಷಯಗಳಲ್ಲಿ ಸಾಧನೆ ಮಾಡಿದಲ್ಲಿ ಅವರನ್ನು ಪುರಸ್ಕಾರ ಮತ್ತು ಸನ್ಮಾನ ಮಾಡುವ ಬಗ್ಗೆ.
4. ಕೃಷಿಯಲ್ಲಿ ಸಾಧನೆಗೈದ ಸಂಘದ ಸದಸ್ಯರನ್ನು ಗುರುತಿಸಿ ಅವರನ್ನು ಪುರಸ್ಕರಿಸಿ ಸನ್ಮಾನ ಮಾಡುವ ಬಗ್ಗೆ.
5. ಅತೀ ಪ್ರಮುಖವಾಗಿ ಸಂಘದ ಸದಸ್ಯರ ಮಕ್ಕಳು ಪ್ರಸ್ತುತ ವರ್ಷದಲ್ಲಿ ಸಾಧನೆ ಮಾಡುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವ ಬಗ್ಗೆ.
6. ಪ್ರಸಕ್ತ ಆರ್ಥಿಕ ವರ್ಷದಿಂದ ನಮ್ಮ ಸಂಘದಲ್ಲಿ ಬೆಳೆ ಸಾಲವನ್ನು ಪಡೆದ ಸದಸ್ಯರಿಗೆ ರಿಯಾಯಿತಿ ಬಡ್ಡಿದರದಲ್ಲಿ 'ಪ್ರಧಾನಮಂತ್ರಿ ಸೂರ್ಯಘರ್ ಯೋಜನೆ'ಯಡಿಯಲ್ಲಿ ಸೋಲಾರ್ ಅಳವಡಿಸಲು ಸಾಲವನ್ನು ನೀಡಲಾಗುವುದು.

ಮುಖ್ಯವಾಗಿ ಯಾವುದೇ ಒಂದು ಸಂಘವು ಯಶಸ್ವಿಯಾಗಿ ಮುಂದುವರೆಯಲು ಆ ಸಂಘದ ಆಡಳಿತ ಮಂಡಳಿಯ ಜೊತೆಗೆ ಸಿಬ್ಬಂದಿ ವರ್ಗದವರು ಕಾರಣರಾಗಿರುತ್ತಾರೆ. ನಮ್ಮ ಸಂಘದ ಉಪಾಧ್ಯಕ್ಷರು **ಶ್ರೀ ಕಾಂತಪ್ಪ ಗೌಡ** ಮತ್ತು ಎಲ್ಲಾ ನಿರ್ದೇಶಕರು ಸೇರಿ ಒಂದೇ ಮನಸ್ಸಿನವರಾಗಿ ಸಂಘಕ್ಕೆ ನೀಡಿದ ಅವಿರತ

ಸೇವೆ ಮತ್ತು ಸಹಕಾರದಿಂದ ಇಂದು ನಮ್ಮ ಸಂಘವು ಉತ್ತುಂಗಕ್ಕೇರಿದೆ. ಈ ಸಂದರ್ಭದಲ್ಲಿ ನಾನು ಪ್ರತ್ಯೇಕವಾಗಿ ಅವರೆಲ್ಲರನ್ನೂ ಗುರುತಿಸಿ ನನ್ನ ಹೃದಯದ ಅಂತರಾಳದಿಂದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಅದೇ ಪ್ರಕಾರ ನಮ್ಮ ಸಂಘದ ಸಿಬ್ಬಂದಿ ವರ್ಗದವರನ್ನು (ಮುಖ್ಯಕಾರ್ಯನಿರ್ವಹಣಾಧಿಕಾರಿ ಮತ್ತು ತಂಡ) ವಿಶೇಷವಾಗಿ ಗುರುತಿಸುತ್ತಾ ಅವರು ಪ್ರಾಮಾಣಿಕವಾಗಿ ವಹಿಸಿಕೊಂಡ ಕೆಲಸ ಕಾರ್ಯಗಳನ್ನು ಅಭಿನಂದಿಸುತ್ತಾ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಆತ್ಮೀಯರೇ **"In a cooperative, success is not measured by how much we earn, but by how much we uplift."** ಇದರ ಅರ್ಥ **"ಸಹಕಾರಿ ಸಂಸ್ಥೆಯಲ್ಲಿ, ಯಶಸ್ಸನ್ನು ನಾವು ಎಷ್ಟು ಗಳಿಸುತ್ತೇವೆ ಎಂಬುದರ ಮೂಲಕ ಅಳೆಯಲಾಗುವುದಿಲ್ಲ, ಆದರೆ ನಮ್ಮ ಸದಸ್ಯರು ಗಳಿಸುವ ಲಾಭ ಮತ್ತು ಅವರ ಉನ್ನತಿಯ ಮೂಲಕ ಅಳೆಯಲಾಗುತ್ತದೆ."** ಅದೇ ರೀತಿ ನಮ್ಮ ಸಂಘವು ಕಳೆದ 55 ವರ್ಷಗಳಿಂದ ಉತ್ತಮ ಸೇವೆಯನ್ನು ನೀಡುತ್ತ ಸದಸ್ಯರ ಸಹಕಾರದೊಂದಿಗೆ ನಂಬಿಕೆಯನ್ನು ಗಳಿಸಿ, ಅದರ ಭದ್ರ ಬುನಾದಿಯ ಮೇಲೆ ಈ ಮಟ್ಟಕ್ಕೆ ಬೆಳೆದು ನಿಂತಿದೆ ಎಂದು ಹೆಮ್ಮೆಯಿಂದ ಹೇಳುತ್ತಿದ್ದೇನೆ. ಭವಿಷ್ಯದಲ್ಲಿ ಕೂಡ ತಮ್ಮೆಲ್ಲರ ಸಹಕಾರದೊಂದಿಗೆ ಸಂಘವು ಪ್ರಗತಿಪಥದ ಉತ್ತುಂಗಕ್ಕೇರುವುದರಲ್ಲಿ ನನಗೆ ಯಾವುದೇ ಸಂಶಯವಿಲ್ಲವೆಂದು ನಿಸ್ಸಂದೇಹವಾಗಿ ಹೇಳಿಕೊಳ್ಳಲು ಸಂತೋಷ ಪಡುತ್ತೇನೆ.

ಸಂಘದ ಪ್ರಗತಿಗೆ ಸಹಕಾರ ನೀಡಿದ ನಮ್ಮ ಸಂಘದ ಸದಸ್ಯರಿಗೆ, ಗೌರವಾನ್ವಿತ ಠೇವಣಿದಾರರಿಗೆ ಕೃತಜ್ಞತೆಗಳು. ದ. ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ **ಡಾ. ಎಂ. ಎನ್. ರಾಜೇಂದ್ರ ಕುಮಾರ್‌ರವರಿಗೆ** ಮತ್ತು ಬೆಳ್ತಂಗಡಿ ತಾಲೂಕಿನ ನಿರ್ದೇಶಕರಾದ **ಶ್ರೀ ಪೂವಾಜೆ ಕುಶಾಲಪ್ಪ ಗೌಡರವರಿಗೆ** ಧನ್ಯವಾದಗಳು. ಸಂಘದ ಪ್ರಗತಿಯಲ್ಲಿ ನನಗೆ ಎಲ್ಲಾ ರೀತಿಯ ಸಹಕಾರ ನೀಡುತ್ತಿರುವ ನಿರ್ದೇಶಕರಿಗೆ ನಾನು ಆಭಾರಿಯಾಗಿದ್ದೇನೆ. ಎಲ್ಲಾ ಸಿಬ್ಬಂದಿ ವರ್ಗದವರಿಗೆ, ದೈನಿಕ ಠೇವಣಿ ಸಂಗ್ರಾಹಕರಿಗೆ, ಸರಾಫರರಿಗೆ ನಾನು ಆಭಾರಿಯಾಗಿದ್ದೇನೆ. ಸಹಕಾರ ಇಲಾಖೆಯ ಉಪನಿಬಂಧಕರಾದ ಶ್ರೀ ರಮೇಶ್ ಎಚ್. ಎನ್. ಮತ್ತು ಸಹಾಯಕ ನಿಬಂಧಕರು ಪುತ್ತೂರು, ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ, ಸಂಘದ ಲೆಕ್ಕಪರಿಶೋಧಕರಾದ ಐ.ವಿ. ಶರ್ಮ & ಕಂಪೆನಿ ಇವರಿಗೆ ಸಂಘದ ಕಾನೂನು ಸಲಹೆಗಾರರಾದ ಶ್ರೀ ಬಿ. ಕೆ. ಧನಂಜಯ ರಾವ್, ಶ್ರೀ ಎನ್. ಅಜಿತ್ ಜೈನ್, ಶ್ರೀ ಕೆ. ಪ್ರತಾಪಸಿಂಹ ನಾಯಕ್, ಶ್ರೀ ಶಶಿಕಿರಣ್ ಜೈನ್, ಶ್ರೀ ಶೈಲೇಶ್ ಠೋಸರ್ ಮತ್ತು ಶ್ರೀಮತಿ ಉಷಾ ಪೈ, ಶ್ರೀ ಅನಿಲ್ ಕುಮಾರ್, ಶ್ರೀ ಮನೋಹರ್ ಕುಮಾರ್‌ರವರಿಗೆ ನನ್ನ ಧನ್ಯವಾದಗಳು.

ಸಂಘದ ಹೆಚ್ಚಿನ ಪ್ರಗತಿ ಸಾಧಿಸಲು ತಮ್ಮ ಸಲಹೆ, ಸೂಚನೆ, ಮಾರ್ಗದರ್ಶನವನ್ನು ಯಾಚಿಸುತ್ತಾ ಈ ಮಹಾಸಭೆಗೆ ಹಾಜರಿದ್ದ ತಮ್ಮೆಲ್ಲರನ್ನೂ ಮಗದೊಮ್ಮೆ ವಂದಿಸುತ್ತೇನೆ.

ಗೌರವಪೂರ್ವಕ ವಂದನೆಗಳೊಂದಿಗೆ –**ಜೈ ಸಹಕಾರಿ,**

ಸಹಿ/–

**ಜೋಯಲ್ ಮೆಂಡೋನ್ಸಾ**

**(ಅಧ್ಯಕ್ಷರು)**

**ಮಡಂತ್ಯಾರು ಕೃಷಿ ಪತ್ತಿನ ಸಹಕಾರಿ ಸಂಘ (ನಿ.)**

# ಮಡಂತ್ಯಾರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿಯಮಿತ ಎಲ್.397

**ಅಂಚೆ : ಮಡಂತ್ಯಾರು –574 224, ಬೆಳ್ತಂಗಡಿ ತಾಲೂಕು, ದ.ಕ.**

**ಸ್ಥಾಪನೆ: 26–12–1970**

## ಮಹಾಸಭೆಯ ನೋಟೀಸು

ಸನ್ಮಾನ್ಯ ಸದಸ್ಯರೇ,

**ನಮ್ಮ ಸಂಘದ 2024–2025ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ದಿನಾಂಕ 13–07–2025ನೇ ಆದಿತ್ಯವಾರ ಪೂರ್ವಾಹ್ನ ಗಂಟೆ 11.00ಕ್ಕೆ ಸರಿಯಾಗಿ ಸಂಘದ ಅಧ್ಯಕ್ಷರಾದ ಶ್ರೀ ಜೋಯೆಲ್ ಗಾಡ್ ಫ್ರೀ ಮೆಂಡೋನ್ಸ ಇವರ ಅಧ್ಯಕ್ಷತೆಯಲ್ಲಿ, ಮಡಂತ್ಯಾರಿನ ಸೇಕ್ರೆಡ್ ಹಾರ್ಟ್ ಸಭಾಭವನದಲ್ಲಿ ಜರಗಿಸುವರೇ ತೀರ್ಮಾನಿಸಲಾಗಿದೆ. ಮಾನ್ಯ ಸದಸ್ಯರೆಲ್ಲರೂ ಸಭೆಯಲ್ಲಿ ಪಾಲ್ಗೊಂಡು ಸಹಕರಿಸಬೇಕಾಗಿ ವಿನಂತಿಸಲಾಗಿದೆ.**

(ಆಡಳಿತ ಮಂಡಳಿ ಆದೇಶದ ಮೇರೆಗೆ)

ಸಹಿ/–

ಸ್ಥಳ: ಮಡಂತ್ಯಾರು

**ಶ್ರೀ ಜೋಕಿಂ ಡಿ'ಸೋಜ**

ದಿನಾಂಕ: 06–06–2025

ಮುಖ್ಯ ಕಾರ್ಯನಿರ್ವಹಣಾಧಿಕಾರಿ

# ಕಾರ್ಯಕ್ರಮಗಳು

1. ಪ್ರಾರ್ಥನೆ
2. ಸ್ವಾಗತ
3. ಮಹಾಸಭೆಯ ನೋಟೀಸನ್ನು ಓದಿ ದಾಖಲಿಸುವುದು.
4. ನಿರ್ದೇಶಕ ಮಂಡಳಿಯು ಮಂಡಿಸಿದ ಹಿಂದಿನ ಸಹಕಾರ ವರ್ಷದ ವರದಿಯ ಪರಿಗಣನೆ ಹಾಗೂ ರೂಪಿಸಿದ ಸಂಘದ ಮುಂಬರುವ ವರ್ಷದ ಕಾರ್ಯಚಟುವಟಿಕೆಗಳನ್ನು ಅನುಮೋದಿಸುವುದು ಸಂಘದ ವ್ಯವಹಾರ ಚಟುವಟಿಕೆಗಳಲ್ಲಿ ಕೊರತೆ ಏನಾದರೂ ಇದ್ದಲ್ಲಿ ಪರಿಶೀಲಿಸಿ ನಿವಾರಣೆ ಕಾರ್ಯಕ್ರಮ ಹಮ್ಮಿಕೊಳ್ಳುವುದು.
5. ಆಡಿಟ್ ಆದ ಹಿಂದಿನ ಸಹಕಾರಿ ವರ್ಷದ ಆಸ್ತಿ ಮತ್ತು ಜವಾಬ್ದಾರಿ ತಃಖ್ತೆ, ಲಾಭ–ನಷ್ಟ ತಃಖ್ತೆ, ಉತ್ಪಾದನಾ ವ್ಯಾಪಾರ ತಃಖ್ತೆ ಮತ್ತು ಮುಂದಿನ ಸಹಕಾರಿ ವರ್ಷದ ಆಯ–ವ್ಯಯದ ಮುಂಗಡ ಪತ್ರ ಜೊತೆಗೆ ಸಂಘದ ವ್ಯವಹಾರದ ಚಟುವಟಿಕೆಗಳ ವರದಿಗೆ ಅನುಮೋದನೆ ನೀಡುವುದು.
6. ಕಾಯ್ದೆ ಹಾಗೂ ನಿಯಮಾವಳಿಗಳ ಅವಕಾಶಗಳಿಗೆ ಒಳಪಟ್ಟು ಲೆಕ್ಕಪರಿಶೋಧನೆ ಆಗಿ ದೃಢೀಕರಿಸಿದ ಲಾಭವನ್ನು ವಿಂಗಡಿಸಿ ಲಾಭಾಂಶ (ಡಿವಿಡೆಂಡ್) ಹಂಚಿಕೆಗೆ ಮಂಜೂರಾತಿ ನೀಡುವುದು.
7. ಶಾಸನಬದ್ಧ ಲೆಕ್ಕ ತಪಾಸಿಗರಿಂದ ಬಂದಿರುವ ಸಂಘದ ಹಿಂದಿನ ವರ್ಷದ ಲೆಕ್ಕಪರಿಶೋಧನಾ ವರದಿ, ಲೆಕ್ಕ ಪರಿಶೋಧಕರವರ ಅಭಿಪ್ರಾಯ ಹಾಗೂ ಸೂಚನೆಗಳಿಗೆ ನೀಡಿದ ಸಮಜಾಯಿಷಿಕೆ ಅಥವಾ ನಿಬಂಧಕರಿಂದ ಬಂದ ವಿಚಾರಣಾ ವರದಿ ಮತ್ತು ಇದಕ್ಕೆ ಅನುಪಾಲನಾ ವರದಿ ಹಾಗೂ ಇತರೇ ಯಾವುದೇ ವಿಷಯವನ್ನು ಪರಿಶೀಲಿಸುವುದು.
8. ಸದಸ್ಯರು ನಿರ್ದೇಶಕ ಮಂಡಳಿಯ ಮೇಲೆ ದೂರಿದ್ದಲ್ಲಿ ಅಂತಹ ಆಪಾದನೆಗಳನ್ನು ಪರಿಶೀಲಿಸುವುದು.
9. ಉಪವಿಧಿಗಳನ್ನು ರೂಪಿಸುವುದು, ಮಾರ್ಪಾಡಿಸುವುದು ಮತ್ತು ತಿದ್ದುಪಡಿಗಳನ್ನು ಅಂಗೀಕರಿಸುವುದು.
10. ನಿರ್ದೇಶಕ ಮಂಡಳಿಯವರು ಸಂಘಕ್ಕೆ ಪಡೆಯಬಹುದಾದ ಸಾಲದ ಗರಿಷ್ಠ ಮಿತಿಯನ್ನು ಹಾಗೂ ಸಂಘದ ಅಧಿಕೃತ ಪಾಲು ಬಂಡವಾಳದ ಮಿತಿಯನ್ನು ನಿಗದಿಪಡಿಸುವುದು.
11. ಸಂಘದ ವ್ಯವಹಾರ ಚಟುವಟಿಕೆಗಳಲ್ಲಿ ಕೊರತೆ ಏನಾದರೂ ಇದ್ದಲ್ಲಿ ಆ ಬಗ್ಗೆ ಪರಿಶೀಲಿಸಿ ಅಂತಹ ಕೊರತೆಯನ್ನು ನೀಗಿಸಿಕೊಳ್ಳಲು ಕಾರ್ಯಕ್ರಮ ಹಮ್ಮಿಕೊಳ್ಳುವುದು.
12. ನಿರ್ದಿಷ್ಟ ಮೀಸಲು ಮತ್ತು ಇತರೇ ನಿಧಿಗಳನ್ನು ರಚಿಸುವುದು.
13. ನಿರ್ದೇಶಕರುಗಳ ಅಥವಾ ಮುಖ್ಯ ಕಾರ್ಯನಿರ್ವಾಹಕರ ಸಂಬಂಧಿಗಳನ್ನೇನಾದರೂ ಸಂಘದ ನೌಕರರನ್ನಾಗಿ ನೇಮಕ ಮಾಡಿಕೊಂಡಿದ್ದಲ್ಲಿ, ಅಂತಹ ನೌಕರರ ಪಟ್ಟಿಯನ್ನು ಅವಲೋಕಿಸುವುದು ಮತ್ತು ಆ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದು.
14. ಸಂಘದ ನಿರ್ದೇಶಕರುಗಳಿಗೆ, ಪದಾಧಿಕಾರಿಗಳಿಗೆ ಮತ್ತು ನೌಕರರುಗಳಿಗೆ ಆಚಾರ ಸಂಹಿತೆಯನ್ನು ರೂಪಿಸುವುದು.
15. ಸಂಘಕ್ಕೆ ಸೇರಿಸಿಕೊಂಡ ಮತ್ತು ತೆಗೆದು ಹಾಕಿದ ಸದಸ್ಯರುಗಳ ಪಟ್ಟಿಯನ್ನು ಪರಿಶೀಲಿಸುವುದು.
16. ಸಂಘಕ್ಕೆ ಬೇರೆ ಸಹಕಾರ ಸಂಘಗಳಲ್ಲಿ ಪಡೆದ ಸದಸ್ಯತ್ವವನ್ನು ಅನುಮೋದಿಸುವುದು.
17. ಸಂಘದ ನಿರ್ದೇಶಕರು ಮತ್ತು ಸದಸ್ಯರು ಸಂಘದ ಸೇವೆಯನ್ನು ಬಳಸಿಕೊಂಡಿರುವ ಬಗ್ಗೆ ಅವಲೋಕಿಸುವುದು.
18. ನಿರ್ದೇಶಕರು ಹಾಗೂ ಅವರ ಸಂಬಂಧಿಕರಿಗೆ ನೀಡಿದ ಸಾಲ–ಮುಂಗಡಗಳು, ಈ ಪೈಕಿ ಸುಸ್ತಿ ಬಾಕಿ ಹಾಗೂ ವಸೂಲಾತಿಗೆ ತೆಗೆದುಕೊಂಡ ಕ್ರಮಗಳು.
19. ಸದಸ್ಯತನ ತಿರಸ್ಕೃತಗೊಂಡವರ ಮೇಲ್ಮನವಿ ಏನಾದರೂ ಇದ್ದಲ್ಲಿ ಪರಿಶೀಲಿಸುವುದು.
20. ಕಾಯ್ದೆ ಕಲಂ 63ರ ಅನ್ವಯ ನಿಗದಿಪಡಿಸಿದ ಪಟ್ಟಿಯಂತೆ ಮುಂದಿನ ಸಾಲಿಗೆ ಲೆಕ್ಕಪರಿಶೋಧಕರ ನೇಮಕ ಮಾಡುವುದು.
21. ನಿರ್ದೇಶಕರಿಗೆ (ಪದಾಧಿಕಾರಿಗಳಿಗೆ) ಕರ್ತವ್ಯ ನಿರ್ವಹಣೆಯ ಸಲುವಾಗಿ ಅಥವಾ ಸಭೆಗಳಿಗೆ ಹಾಜರಾಗುವ ಸಲುವಾಗಿ ನೀಡಿದ ಸಂಭಾವನೆ/ಪ್ರಯಾಣ ಭತ್ಯೆ/ ಇತರೆ ಭತ್ಯೆಗಳ ಅವಲೋಕನ.
22. ಒಟ್ಟುಗೂಡಿಸುವಿಕೆ, ವಿಭಜನೆ, ವಿಲೀನತೆ ಮತ್ತು ಸ್ವತ್ತುಗಳ ಹಾಗೂ ಹೊಣೆಗಾರಿಕೆಗಳ ವರ್ಗಾವಣೆ.
23. ಸಂಘದ ನಿಧಿಗಳ ಬಳಕೆಯನ್ನು ಪರಿಶೀಲಿಸುವುದು.
24. ಸಂಘದ ಸಮಾಪನೆ.
25. ಸೂಕ್ತ ಮುನ್ಸೂಚನೆ ಮೇರೆಗೆ ತರಬಹುದಾದ ಇತರೇ ವಿಷಯಗಳು.
26. ಧನ್ಯವಾದ.

# ಮಡಂತ್ಯಾರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿಯಮಿತ ಎಲ್. 397

**ಅಂಚೆ : ಮಡಂತ್ಯಾರು –574 224 ಬೆಳ್ತಂಗಡಿ ತಾಲೂಕು, ದ.ಕ.**

ಇದರ

## 2024–25ನೇ ಸಾಲಿನ ವರದಿ

ಸನ್ಮಾನ್ಯ ಸದಸ್ಯರೇ,

ನಮ್ಮ ಸಂಘದ 55ನೇ ವಾರ್ಷಿಕ ಮಹಾಸಭೆಗೆ ತಮ್ಮೆಲ್ಲರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತ 2024–25ನೇ ಸಾಲಿನ ವಾರ್ಷಿಕ ವರದಿಯನ್ನು ತಮ್ಮ ಮುಂದಿಡಲು ಸಂತೋಷಪಡುತ್ತೇವೆ.

### 1. ಸಂಘದ ಕಾರ್ಯಕ್ಷೇತ್ರ

ಸಂಘದ ಕಾರ್ಯಕ್ಷೇತ್ರವು ಈ ಕೆಳಗಿನ ನಾಲ್ಕು ಗ್ರಾಮಗಳನ್ನು ಒಳಗೊಂಡಿರುತ್ತದೆ.

1. ಮಾಲಾಡಿ
2. ಸೋಣಂದೂರು
3. ಪಾರೆಂಕಿ
4. ಕುಕ್ಕಳ


### 2. ಪ್ರಧಾನ ಕಛೇರಿ ಮತ್ತು ಶಾಖೆಗಳು:


ಮಡಂತ್ಯಾರಿನಲ್ಲಿರುವ ಸಂಘದ ಕೇಂದ್ರ ಕಛೇರಿಯು 10 ಸೆಂಟ್ಸ್ ಸ್ವಂತ ಸ್ಥಳ ಹೊಂದಿದ್ದು, ಸುಸಜ್ಜಿತ 4 ಅಂತಸ್ತಿನ ಕಟ್ಟಡ ಕಾಮಗಾರಿಯು ಪೂರ್ಣಗೊಂಡಿದ್ದು, ಕಳೆದ 23–09–2024ರಂದು ಲೋಕಾರ್ಪಣೆಗೊಂಡಿದೆ. ತಳ ಅಂತಸ್ತಿನಲ್ಲಿ ರಸಗೊಬ್ಬರ ಮಾರಾಟ, ಉತ್ಪತ್ತಿ ಈಡಿನ ದಾಸ್ತಾನು ಮತ್ತು ಪಡಿತರ ವಿಭಾಗಗಳಿದ್ದು, ನೆಲ ಅಂತಸ್ತನ್ನು ಬಾಡಿಗೆಗೆ ನೀಡಲಾಗಿದೆ 1ನೇ ಮಹಡಿಯಲ್ಲಿ ಸಂಪೂರ್ಣ ಹವಾನಿಯಂತ್ರಿತ ಬ್ಯಾಂಕಿಂಗ್ ವಿಭಾಗವಿದ್ದು 2ನೇ ಮಹಡಿಯಲ್ಲಿ ನಿರ್ದೇಶಕರ ಸಭಾ ಕೊಠಡಿ, ವಿಶ್ರಾಂತಿ ಕೋಣೆಯಿದ್ದು, 3ನೇ ಮಹಡಿಯಲ್ಲಿ ಸಭಾಭವನವಿದ್ದು ಬಾಡಿಗೆಗೆ ನೀಡಲಾಗಿದೆ. ಸದಸ್ಯರ ಕ್ಷಿಪ್ರ ವ್ಯವಹರಣೆಗೆ ಲಿಫ್ಟ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಬ್ಯಾಂಕಿಂಗ್ ವಿಭಾಗದಲ್ಲಿ ಸಂಘದ ಸದಸ್ಯರ ಬೆಲೆಬಾಳುವ ವಸ್ತುಗಳನ್ನು ಭದ್ರವಾಗಿಡಲು ಸೇಫ್ ಲಾಕರ್ ಸೌಲಭ್ಯವನ್ನು ಪ್ರಾರಂಭಿಸಲಾಗಿದೆ.

ಪಣಕಜೆ ಶಾಖೆಯ 11 ಸೆಂಟ್ಸ್ ಸ್ವಂತ ಸ್ಥಳದಲ್ಲಿ, ಬ್ಯಾಂಕಿಂಗ್ ವಿಭಾಗ, ಪಡಿತರ ವಿಭಾಗಗಳೊಂದಿಗೆ ಆರು ಅಂಗಡಿ ಕೋಣೆಗಳು ಮತ್ತು ಒಂದು ವಿಶಾಲವಾದ ನೆಲ ಅಂತಸ್ತನ್ನು ಬಾಡಿಗೆಗೆ ನೀಡಲಾಗಿದೆ. ಪುಂಜಾಲಕಟ್ಟೆ ಶಾಖೆಗೆ 15 ಸೆಂಟ್ಸ್ ಸ್ಥಳವಿದ್ದು, ಇದರಲ್ಲಿ ಶಾಖಾ ಬ್ಯಾಂಕಿಂಗ್ ವಿಭಾಗವಿರುತ್ತದೆ. ಒಂದು ಕೊಠಡಿಯನ್ನು ಪುಂಜಾಲಕಟ್ಟೆ ಅಂಚೆ ಕಛೇರಿಗೆ ಮತ್ತು 3 ವಾಸ್ತವ್ಯ ಯೋಗ್ಯ ಮನೆಗಳನ್ನು ಬಾಡಿಗೆಗೆ ನೀಡಲಾಗಿದೆ.

### 3. ಸದಸ್ಯತನ ಮತ್ತು ಪಾಲು ಬಂಡವಾಳ:


ಸಂಘದಲ್ಲಿ 31–03–2025ಕ್ಕೆ ಇದ್ದಂತೆ 'ಅ' ತರಗತಿ 5345 ಸದಸ್ಯರ ರೂ. 4,14,56,035/– ಮತ್ತು 'ಡಿ' ತರಗತಿ 239 ಸದಸ್ಯರ ರೂ.3,46,000/– ಹಾಗೂ 7389 'ಸಿ' ತರಗತಿ (ನಾಮ ಮಾತ್ರ) ಸದಸ್ಯರ ರೂ. 1,91,000/– ಪಾಲು ಬಂಡವಾಳ ಹೀಗೆ ಒಟ್ಟು ರೂ. 4,19,93,035/– ಇದ್ದು ಕಳೆದ ಸಾಲಿಗಿಂತ ರೂ. 40,85,900/– ಪಾಲು ಬಂಡವಾಳ ವೃದ್ಧಿಯಾಗಿರುತ್ತದೆ. ಸಂಘದ ಕಾರ್ಯಕ್ಷೇತ್ರದಲ್ಲಿ ವಾಸ್ತವ್ಯವಿರುವವರು ಸಂಘದ ಸದಸ್ಯರಾಗಬೇಕಾಗಿ ವಿನಂತಿಸುತ್ತೇವೆ.




## 4. ಠೇವಣಾತಿಗಳು:

ಪ್ರಕೃತ ಸಂಘವು ರೂ. 91,41,42,777.05/– ವಿವಿಧ ರೀತಿಯ ಠೇವಣಿಗಳನ್ನು ಹೊಂದಿದ್ದು ಕಳೆದ ಸಾಲಿಗಿಂತ ರೂ. 13,60,81,192.83/– ಠೇವಣಿ ಹೆಚ್ಚಳವಾಗಿದೆ ಎಂದು ತಿಳಿಸಲು ಸಂತೋಷವಾಗುತ್ತದೆ. ಠೇವಣಿ ಸಂಗ್ರಹದಲ್ಲಿ ಸಂಘವು ವರ್ಷದಿಂದ ವರ್ಷಕ್ಕೆ ಪ್ರಗತಿ ಸಾಧಿಸುತ್ತಿದ್ದು ಸಂಘದ ಮೇಲೆ ವಿಶ್ವಾಸವಿರಿಸಿದ ಎಲ್ಲಾ ಠೇವಣಿದಾರರಿಗೆ ಸಂಘವು ಕೃತಜ್ಞತೆ ಸಲ್ಲಿಸುತ್ತದೆ.




## 5. ನಿಧಿಗಳು:

ಕ್ಷೇಮನಿಧಿ, ಕಟ್ಟಡ ನಿಧಿ, ಸಿಬ್ಬಂದಿ ಕಲ್ಯಾಣ, ಸದಸ್ಯರ ಸಹಾಯನಿಧಿ ಮತ್ತು ಇತರ ನಿಧಿಗಳ ಮೊತ್ತ ರೂ. 8,71,52,342.12/– ಅಲ್ಲದೆ ಸವಕಳಿ ನಿಧಿ ರೂ.85,26,501.07/– ಕ್ರೋಢೀಕೃತವಾಗಿದೆ.




## 6. ಸರಕಾರದ ಬಡ್ಡಿ ಸಹಾಯಧನ:


ರಾಜ್ಯ ಸರ್ಕಾರದ ಬಡ್ಡಿ ರಿಯಾಯ್ತಿ ಯೋಜನೆಯು ಈಗಲೂ ಜಾರಿಯಲ್ಲಿದ್ದು, ಈ ವರ್ಷದಲ್ಲಿ ರೂ.54,52,740/– ಸರಕಾರದ ಬಡ್ಡಿ ಜಮೆ ಬಂದಿದ್ದು, ವರ್ಷಾಂತ್ಯಕ್ಕೆ ರೂ. 58,84,637/– ಸಂಘಕ್ಕೆ ಬರಲು ಬಾಕಿ ಇರುತ್ತದೆ.

ಸಂಘವು ಸದಸ್ಯರಿಗೆ ನೀಡುತ್ತಿರುವ ಕೃಷಿ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳಿಗೆ ಸರ್ಕಾರದ ಬಡ್ಡಿ ರಿಯಾಯ್ತಿ ಸೌಲಭ್ಯವು, ಕಂತುಗಳನ್ನು ವಾಯಿದೆಯೊಳಗೆ ಪಾವತಿಸುವ ಸಾಲಗಳಿಗೆ ಮಾತ್ರ ಅನ್ವಯವಾಗುತ್ತದೆ. ವಾಯಿದೆ ದಾಟಿದ ನಂತರ ವಸೂಲಾಗುವ ಸಾಲಗಳಿಗೆ ಸಂಘವು ವಿಧಿಸುವ ಸಾಮಾನ್ಯ ಬಡ್ಡಿದರವು ಸಾಲ ನೀಡಿದ ದಿನಾಂಕದಿಂದಲೇ ಅನ್ವಯವಾಗುತ್ತದೆ. ಈ ವಿಷಯವನ್ನು ಸಾಲಗಾರ ಸದಸ್ಯರು ಗಂಭೀರವಾಗಿ ಪರಿಗಣಿಸಿ ಕ್ಲಪ್ತ ಸಮಯಕ್ಕೆ ಸಾಲಗಳನ್ನು ಮರುಪಾವತಿಸಿ ಸರ್ಕಾರದ ಬಡ್ಡಿ ರಿಯಾಯಿತಿ ಯೋಜನೆಯ ಸದುಪಯೋಗ ಪಡೆದುಕೊಳ್ಳಲು ವಿನಂತಿ.

ಕೃಷಿ ಸಾಲ ಪಡೆಯುವ ರೈತ ಸದಸ್ಯರು ತಮ್ಮ ರೈತ ಗುರುತು ಸಂಖ್ಯೆ (Farmer ID) ಪಡೆದುಕೊಳ್ಳುವುದು ಕಡ್ಡಾಯವಾಗಿದೆ ಮತ್ತು ತಾವು ಹೊಂದಿರುವ ಎಲ್ಲಾ ಕೃಷಿ ಜಮೀನಿನ ಸರ್ವೆ ನಂಬ್ರಗಳಿಗೆ ಈ ಗುರುತು ಸಂಖ್ಯೆಯನ್ನು ಲಿಂಕ್ ಮಾಡಿಕೊಳ್ಳುವುದು ಕೂಡ ಅತೀ ಅಗತ್ಯವಾಗಿರುತ್ತದೆ. ಆದುದರಿಂದ ಈವರೆಗೆ Farmer ID ಪಡೆದುಕೊಳ್ಳದ ರೈತರು ತಮ್ಮ ಪಹಣಿಪತ್ರ, ಆಧಾರ್ ಹಾಗೂ ರಾಷ್ಟ್ರೀಯ/ಡಿಸಿಸಿ ಬ್ಯಾಂಕಿನ ಉಳಿತಾಯ ಖಾತೆಯ ಜೆರಾಕ್ಸ್ ಪ್ರತಿಗಳೊಂದಿಗೆ ತಮ್ಮ ಹೋಬಳಿಯ ರೈತ ಸಂಪರ್ಕ ಕೇಂದ್ರ/ಸಮೀಪದ ಗ್ರಾಮ ವನ್ ಕೇಂದ್ರ ಅಥವಾ ಸೈಬರ್ ಕೇಂದ್ರಗಳನ್ನು ಈ ಬಗ್ಗೆ ಸಂಪರ್ಕಿಸುವುದು.

## 7. ಸದಸ್ಯರ ಸಾಲಗಳು ಮತ್ತು ಮುಂಗಡಗಳು:

ವರ್ಷಾರಂಭಕ್ಕೆ ರೂ.71,67,21,348/– ಹೊರಬಾಕಿ ಸಾಲ ಇದ್ದು ಸದ್ರಿ ವರ್ಷದಲ್ಲಿ ರೂ.88,73,44,598/– ಸಾಲ ವಿತರಿಸಿ ರೂ.72,03,95,884/– ಸಾಲ ವಸೂಲಾತಿ ಮಾಡಿದ್ದು, ದಿನಾಂಕ 31.03.2025ಕ್ಕೆ ರೂ.88,36,70,062/– ಸಾಲ ಹೊರಬಾಕಿ ಇರುತ್ತದೆ. ಇದರಲ್ಲಿ ರೂ.2,79,67,179/– ಸಾಲ



ಸುಸ್ಥಿಯಾಗಿರುತ್ತದೆ. ಸದಸ್ಯರ ಸಾಲದ ಬೇಡಿಕೆಯನ್ನು ಪೂರೈಸುವಲ್ಲಿ ಸಂಘವು ಗರಿಷ್ಠ ಪ್ರಮಾಣದ ಸೇವೆಯನ್ನು ನೀಡುತ್ತಿದೆ. ಸಂಘದಿಂದ ಸಾಲ ಪಡೆದ ರೈತರು ತಮ್ಮ ಸಾಲದ ಸದುಪಯೋಗ ಪಡೆದುಕೊಂಡು, ಆದಾಯವನ್ನು ಗಳಿಸಿ, ಸಾಲವನ್ನು ಸಕಾಲದಲ್ಲಿ ಮರುಪಾವತಿಸಿ ಸಂಘದ ಅಭಿವೃದ್ಧಿಗೆ ಸಹಕರಿಸಲು ವಿನಂತಿಸಲಾಗಿದೆ.

### 8. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಸಾಲ:

ಸದ್ರಿ ವರ್ಷದಲ್ಲಿ ರೂ. 17,06,21,000/– ಸಾಲವನ್ನು ಕೇಂದ್ರ ಸಹಕಾರಿ ಬ್ಯಾಂಕಿನಿಂದ **MKCC** ಸಾಲವಾಗಿ ಪಡೆದು ಸದಸ್ಯರಿಗೆ ವಿತರಿಸಲಾಗಿದೆ.

### 9. ವ್ಯಾಪಾರ ವಹಿವಾಟು:

2024–2025ನೇ ಸಾಲಿನಲ್ಲಿ ಸಂಘ ಪಡಿತರ ಸಾಮಗ್ರಿ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳನ್ನು ಮಾರಾಟ ಮಾಡಿದ್ದು, ರೂ.36,53,797.14/–ರ ಮಾಲು ಖರೀದಿಸಿ ರೂ.28,41,512.86/– ಮಾರಾಟ ಮಾಡಿ ವ್ಯಾಪಾರ ವೆಚ್ಚ ಕಳೆದು ರೂ.6,84,124.14/– ಲಾಭ ಗಳಿಸಿದೆ.

### 10. ರೈತರ ವೈಯಕ್ತಿಕ ಅಪಘಾತ ವಿಮೆ :

ನಮ್ಮ ಸಂಘದಿಂದ MKCC ಸಾಲ ಪಡೆದುಕೊಂಡ 720 ರೈತರಿಗೆ ಉಚಿತವಾಗಿ ವೈಯಕ್ತಿಕ ಅಪಘಾತ ವಿಮೆಯಲ್ಲಿ (PAIS) ನೋಂದಾಯಿಸಲಾಗಿದೆ.

### 11. ವಿನಿಯೋಗಗಳು:


ಪ್ರಕೃತ ಸಂಘವು ವಿವಿಧ ಬ್ಯಾಂಕ್‌ಗಳಲ್ಲಿ ರೂ.31,47,78,511.33/– ನಿರಖು ಠೇವಣಿಗಳಲ್ಲಿ ವಿನಿಯೋಗಿಸಿದೆ. ಅಲ್ಲದೆ ರೂ.86,03,500/– ನ್ನು ವಿವಿಧ ಸಹಕಾರಿ ಸಂಸ್ಥೆಗಳ ಪಾಲು ಬಂಡವಾಳದಲ್ಲಿ ವಿನಿಯೋಗಿಸಿದೆ.

### 12. ಸದಸ್ಯರ ಕ್ಷೇಮ ನಿಧಿ:

ಈ ವರ್ಷದಲ್ಲಿ ಸುಮಾರು 23 ಮಂದಿ ಸದಸ್ಯರಿಗೆ ರೂ.1,82,000/– ನ್ನು ವೈದ್ಯಕೀಯ ಉದ್ದೇಶಗಳಿಗಾಗಿ ಸದಸ್ಯರ ಕ್ಷೇಮನಿಧಿಯಿಂದ ನೆರವು ನೀಡಿ ಸಾಂತ್ವನ ಹೇಳಲಾಗಿದೆ. ಅಲ್ಲದೆ 11 ಸಂಘ–ಸಂಸ್ಥೆಗಳಿಗೆ ವಿವಿಧ ಉದ್ದೇಶಗಳಿಗೆ ರೂ.99,525/–ನ್ನು ಸಂಘದ ಧರ್ಮಾರ್ಥ ನಿಧಿಯಿಂದ ಪಾವತಿ ಮಾಡಲಾಗಿದೆ.

### 13. ಲಾಭ ನಷ್ಟದ ತಃಖ್ತೆ :

2024–25ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಮಂಗಳೂರಿನ ಶಾಸನಬದ್ಧ ಲೆಕ್ಕಪರಿಶೋಧಕರಾದ ಐ.ವಿ. ಶರ್ಮ ಇವರು ನಡೆಸಿರುತ್ತಾರೆ. ಸಂಘವು ಈ ವರ್ಷದಲ್ಲಿ ರೂ.1,62,55,756.84/– ನಿವ್ವಳ ಲಾಭ ಗಳಿಸಿದೆ. ಪ್ರಸಕ್ತ ಸಾಲಿನ ಆಡಿಟ್ ವರ್ಗೀಕರಣ ಹಿಂದಿನ ವರ್ಷದಂತೆಯೇ 'ಅ' ತರಗತಿಯಲ್ಲಿರುತ್ತದೆ.




### 14. ಆಡಳಿತ ಮಂಡಳಿ:

ದ.ಕ. ಜಿಲ್ಲಾ ಉಪನಿಬಂಧಕರ ಆದೇಶದಂತೆ ದಿನಾಂಕ 01–12–2024ರಂದು ನಮ್ಮ ಸಂಘದ ಆಡಳಿತ ಮಂಡಳಿಗೆ ಚುನಾವಣೆ ನಡೆದಿರುತ್ತದೆ. ಈ ಚುನಾವಣೆಯಲ್ಲಿ ಮಾನ್ಯ ಉಚ್ಚನ್ಯಾಯಾಲಯದ ಮಧ್ಯಂತರ ಆದೇಶದಂತೆ ಅರ್ಹತೆ ಪಡೆದ ಮತಗಳನ್ನು ಎಣಿಸಿ, ಮುಂದಿನ ಆದೇಶದಂತೆ ನಂತರ ಫಲಿತಾಂಶ ಘೋಷಿಸುವುದಾಗಿ ಚುನಾವಣಾಧಿಕಾರಿಗಳು ತೀರ್ಮಾನಿಸಿದ್ದು, ಈ ಅವಧಿಯಲ್ಲಿ ಸಂಘದ ದೈನಂದಿನ ಕಾರ್ಯಚಟುವಟಿಕೆಗಳನ್ನು ನಡೆಸಲು ಮಾನ್ಯ ಸ.ಸಂ.ಗಳ ಸಹಾಯಕ ನಿಬಂಧಕರು ಪುತ್ತೂರು, ಶ್ರೀ ಸಿರಾಜುದ್ದೀನ್ ವಲಯ ಮೇಲ್ವಿಚಾರಕರು, ದ.ಕ. ಜಿಲ್ಲಾ ಸಹಕಾರ ಬ್ಯಾಂಕ್ ಮಂಗಳೂರು ಇವರನ್ನು ದಿನಾಂಕ 05–12–2024ರಿಂದ ವಿಶೇಷಾಧಿಕಾರಿಗಳಾಗಿ ನೇಮಿಸಿದ್ದರು. ದಿನಾಂಕ 29–01–2025ರ ಮಾನ್ಯ ಉಚ್ಚನ್ಯಾಯಾಲಯದ ಆದೇಶದಂತೆ, ದಿನಾಂಕ 03–03–2025ರಂದು ಸಂಘದ ಆಡಳಿತ ಮಂಡಳಿಯ ರಚನೆಯಾಗಿರುತ್ತದೆ. ಅಧ್ಯಕ್ಷರಾಗಿ ಶ್ರೀ ಜೋಯೆಲ್ ಗಾಢ್‌ಫ್ರೀ ಮೆಂಡೋನ್ಸ, ಉಪಾಧ್ಯಕ್ಷರಾಗಿ ಶ್ರೀ ಕಾಂತಪ್ಪ ಗೌಡ ಆಯ್ಕೆಯಾಗಿರುತ್ತಾರೆ.

ಈ ಸಂದರ್ಭದಲ್ಲಿ ಈ ಹಿಂದಿನ ಆಡಳಿತ ಮಂಡಳಿಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರಿಗೆ ಹಾಗೂ ವಿಶೇಷ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ಶ್ರೀ ಸಿರಾಜುದ್ದೀನ್, ವಲಯ ಮೇಲ್ವಿಚಾರಕರು, ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಇವರಿಗೆ ಸಂಘವು ಕೃತಜ್ಞತೆ ಸಲ್ಲಿಸುತ್ತದೆ.

ವರದಿ ವರ್ಷದಲ್ಲಿ 11 ಆಡಳಿತ ಮಂಡಳಿ ಸಭೆಗಳು, 26 ಸಾಲದ ಉಪಸಮಿತಿ ಸಭೆಗಳು ಜರಗಿರುತ್ತವೆ. ಆಡಳಿತ ಮಂಡಳಿ ಸದಸ್ಯರು ನಿರಂತರವಾಗಿ ಸಂಘದ ಕಾರ್ಯಕಲಾಪಗಳನ್ನು ವಿಮರ್ಶಿಸುತ್ತಿರುವುದರಿಂದ ಸಂಘದ ವ್ಯವಹಾರಗಳಲ್ಲಿ ಪ್ರಗತಿ ಸಾಧಿಸಲು ಸಾಧ್ಯವಾಗಿದೆ.

### 15. ಸಿಬ್ಬಂದಿ ವರ್ಗ:

ಸಂಘದಲ್ಲಿ ಖಾಯಂ ಆಗಿ 12 ಮಂದಿ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು ಓರ್ವ ಸಿಬ್ಬಂದಿಯನ್ನು ಗುತ್ತಿಗೆ ಆಧಾರದಲ್ಲಿ ನಿಯೋಜಿಸಲಾಗಿದೆ. 6 ಮಂದಿ ದೈನಿಕ ಠೇವಣಿ ಸಂಗ್ರಾಹಕರು, ಇಬ್ಬರು ಸರಾಫರು ಇರುತ್ತಾರೆ.

### 16. ವಂದನೆಗಳು:

ನಮ್ಮ ಸಂಘದ ಬೆಳವಣಿಗೆಯಲ್ಲಿ ಸಹಕರಿಸಿದ ಗೌರವಾನ್ವಿತ ಸದಸ್ಯರಿಗೆ, ಠೇವಣಿದಾರರಿಗೆ ಸಕಾಲದಲ್ಲಿ ಅಗತ್ಯ ಮಾಹಿತಿ ಒದಗಿಸುವ ಸ.ಸಂ.ಗಳ ಉಪನಿಬಂಧಕರು ಮಂಗಳೂರು, ಪುತ್ತೂರು ವಲಯದ ಸಹಾಯಕ ನಿಬಂಧಕರಿಗೆ ಮತ್ತು ಬೆಳ್ತಂಗಡಿ ತಾಲೂಕು ಸಹಕಾರ ಅಭಿವೃದ್ಧಿ ಅಧಿಕಾರಿಯವರಿಗೆ ವಂದನೆಗಳು. ಈ ವರ್ಷ ಲೆಕ್ಕಪರಿಶೋಧನೆ ನಿರ್ವಹಿಸಿದ ಶಾಸನಬದ್ಧ ಲೆಕ್ಕಪರಿಶೋಧಕರಾದ ಶ್ರೀ ಐ. ವಿ. ಶರ್ಮಾ ಮತ್ತು ಕಂ. ಅವರಿಗೆ ಕೃತಜ್ಞತೆಗಳು. ಸಂಘಕ್ಕೆ ಕಾನೂನು ಮಾಹಿತಿ ನೀಡುತ್ತಿರುವ ನ್ಯಾಯವಾದಿಗಳಾದ ಶ್ರೀ ಬಿ.ಕೆ. ಧನಂಜಯ ರಾವ್, ಎನ್. ಅಜಿತ್, ಶ್ರೀಮತಿ ಉಷಾ ಪೈ, ಶ್ರೀ ಕೆ. ಪ್ರತಾಪ್‌ಸಿಂಹ ನಾಯಕ್, ಶ್ರೀ ಶಶಿಕಿರಣ್ ಜೈನ್, ಶ್ರೀ ಶೈಲೇಶ್ ಠೋಸರ್, ಶ್ರೀ ಅನಿಲ್ ಕುಮಾರ್ ಮತ್ತು ಶ್ರೀ ಮನೋಹರ್ ಕುಮಾರ್‌ರವರಿಗೆ ಅಭಿನಂದನೆಗಳು. ಸಂಘದ ಅನುಮೋದಿತ ಭೂ ಮೌಲ್ಯ ಮಾಪಕರಾದ ಶ್ರೀ ಸುನಿತ್ ಕುಮಾರ್, ಶ್ರೀ ಅಜಯ್ ಡಿ'ಕುನ್ಹ, ಪ್ರಶಾಂತ್ ಗೌಡ, ಆ್ಯಲನ್ ಡಿ'ಸೋಜ, ಹಿದಾಯತುಲ್ಲ ಮತ್ತು ಪ್ರದೀಪ್‌ರವರಿಗೆ ಕೃತಜ್ಞತೆಗಳು. ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಅಧ್ಯಕ್ಷರಿಗೆ, ಆಡಳಿತ ಮಂಡಳಿ ಸದಸ್ಯರಿಗೆ, ವ್ಯವಸ್ಥಾಪನಾ ನಿರ್ದೇಶಕರು ಮತ್ತು ಎಲ್ಲಾ ಸಿಬ್ಬಂದಿಗಳಿಗೆ, ವಲಯ ಮೇಲ್ವಿಚಾರಕರಿಗೆ, ವಿಶೇಷವಾಗಿ ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಮಡಂತ್ಯಾರು ಶಾಖೆಯ ವ್ಯವಸ್ಥಾಪಕರು ಮತ್ತು ಸಿಬ್ಬಂದಿಗಳಿಗೆ ನಾವು ಋಣಿಗಳು. ತಾಲೂಕು ತಹಶೀಲ್ದಾರರಿಗೆ, ಸಹಾಯಕ ಕೃಷಿ ನಿರ್ದೇಶಕರಿಗೆ, ಕರ್ನಾಟಕ ರಾಜ್ಯ ಆಹಾರ ನಿಗಮ ಮತ್ತು ನಾಗರಿಕ ಪೂರೈಕೆಯ ಬೆಳ್ತಂಗಡಿ ಡಿಪೋ ವ್ಯವಸ್ಥಾಪಕರಿಗೆ, ನಮ್ಮ ಕಾರ್ಯವ್ಯಾಪ್ತಿಯ ಗ್ರಾಮ ಪಂಚಾಯತ್ ಅಧ್ಯಕ್ಷರಿಗೆ ಮತ್ತು ಅಧಿಕಾರ ವರ್ಗದವರಿಗೆ, ನಮ್ಮ ಸಹಕಾರ ಸಂಘದ ಎಲ್ಲಾ ಸಿಬ್ಬಂದಿಗಳಿಗೆ, ದೈನಿಕ ಠೇವಣಿ ಸಂಗ್ರಾಹಕರಿಗೆ, ಸರಾಫರಿಗೆ ಹಾಗೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತಾ ಮುಂದೆಯೂ ಸಂಘದ ಬೆಳವಣಿಗೆಯಲ್ಲಿ ಸಹಕರಿಸುವಂತೆ ವಿನಂತಿಸುತ್ತೇವೆ.

**(ಆಡಳಿತ ಮಂಡಳಿಯ ಆದೇಶದ ಮೇರೆಗೆ)**

ಸಹಿ/–

**ಶ್ರೀ ಜೋಕಿಂ ಡಿ'ಸೋಜ**
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಸಹಿ/–

**ಶ್ರೀ ಜೋಯೆಲ್ ಗಾಡ್ ಫ್ರೀ ಮೆಂಡೋನ್ಸ**
ಅಧ್ಯಕ್ಷರು

## ಮಡಂತ್ಯಾರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.)

ಅಂಚೆ: ಮಡಂತ್ಯಾರು, ಬೆಳ್ತಂಗಡಿ ಪಿನ್ – 574 224

**ದಿನಾಂಕ 01/04/2024 ರಿಂದ 31/03/2025 ವರೆಗಿನ ಜಮಾ – ಖರ್ಚಿನ ತಃಖ್ತೆ**

| ವಿವರ | ಜಮಾ | ಖರ್ಚು |
|---|---|---|
| 1. ಪಾಲು ಬಂಡವಾಳ | 4850900.00 | 765000.00 |
| 2. ಕ್ಷೇಮ ನಿಧಿ | 4385749.49 | 0.00 |
| 3. ಇತರ ನಿಧಿಗಳು | 6695495.42 | 1874215.00 |
| 4. ಸವಕಳಿ ನಿಧಿಗಳು | 1731949.00 | 189935.14 |
| 5. ಸಹಾಯಧನಗಳು | 810000.00 | 0.00 |
| 6. ಠೇವಣಾತಿಗಳು | 2139455249.65 | 2003606936.82 |
| 7. ಸಿಬ್ಬಂದಿ ಠೇವಣಾತಿಗಳು | 232880.00 | 0.00 |
| 8. ಇತರ ಸಲ್ಲ ತಕ್ಕ ಬಾಬ್ತುಗಳು | 93035330.20 | 92011002.60 |
| 9. ಪಡೆದ ಸಾಲಗಳು (ದ.ಕ.ಜಿ.ಕೇ.ಸ.ಬ್ಯಾಂಕಿನಿಂದ) | 219941000.00 | 177434000.00 |
| 10. ಕಾದಿರಿಸುವಿಕೆ | 42863074.00 | 30641551.00 |
| 11. ಬ್ಯಾಂಕು ಖಾತೆ | 883068641.01 | 874155676.12 |
| 12. ದ.ಕ.ಜಿ.ಕೇ.ಸ.ಬ್ಯಾಂಕಿನಲ್ಲಿ ಇತರ ಹೂಡಿಕೆಗಳು | 0.00 | 5465122.49 |
| 13. ಹೂಡಿಕೆಗಳು | 98313640.00 | 137291141.42 |
| 14. ಶೇರುಗಳಲ್ಲಿ ಹೂಡಿಕೆಗಳು | 0.00 | 510000.00 |
| 15. ಸಾಲಗಳು | 720395884.00 | 887344598.00 |
| 16. ಅಮಾನತು ಮೂಲ (ಬರತಕ್ಕದ್ದು) | 34072984.00 | 16314823.92 |
| 17. ಸ್ಥಿರ ಚರ ಸೊತ್ತುಗಳು | 189935.14 | 22626335.00 |
| 18. ಚರ ಆಸ್ತಿ | 184779.58 | 840738.88 |

| | | |
|---|---|---|
| 19. ಖರೀದಿ ಖಾತೆ | 0.00 | 3653797.14 |
| 20. ಮಾರಾಟ ಖಾತೆ | 2841512.86 | 0.00 |
| 21. ಮಾರಾಟ ಆದಾಯಗಳು | 725275.10 | 0.00 |
| 22. ಮಾರಾಟ ವೆಚ್ಚಗಳು | 2476.14 | 202558.00 |
| 23. ಬಡ್ಡಿ ಆದಾಯ | 107322927.76 | 0.00 |
| 24. ಬಡ್ಡಿ ಖರ್ಚು | 25933136.00 | 103944648.26 |
| 25. ಇತರ ಆದಾಯಗಳು | 3553383.97 | 14770.00 |
| 26. ಸಿಬ್ಬಂದಿ ಖರ್ಚು | 8000.00 | 6519100.00 |
| 27. ಇತರ ಆದಾಯ ಮತ್ತು ಖರ್ಚು | 6445231.19 | 13003673.96 |
| 28. ಲೆಕ್ಕಪರಿಶೋಧನಾ ಶುಲ್ಕ | 250000.00 | 549481.00 |
| 29. ಸವಕಳಿ ಖಾತೆ | 0.00 | 1731949.00 |
| 30. ಕಾದಿರಿಸಿದ ಬಾಬ್ತುಗಳು | 4422943.00 | 6595653.00 |
| 31. ಡ್ಯೂಟಿ ಮತ್ತು ತೆರಿಗೆ | 1192812.56 | 1129024.56 |
| 32. ಬ್ರಾಂಚು ಡಿವಿಶನು | 146734920.58 | 146734920.58 |
| 33. ಆದಾಯ ತೆರಿಗೆ | 0.00 | 4714.00 |
| 34. ಲಾಭ | 0.00 | 17427411.49 |
| ಜುಮ್ಲಾ | **4549660110.65** | **4552582777.38** |
| ಆರಂಭದ ನಗದು ಶಿಲ್ಕು | 8264706.13 | 5342039.40 |
| **ಒಟ್ಟು ಜುಮ್ಲಾ** | **4557924816.78** | **4557924816.78** |

| ಸಹಿ/– | ಸಹಿ/– | ಸಹಿ/– | ಸಹಿ/– |
|---|---|---|---|
| **ಮುಖ್ಯ ಕಾರ್ಯನಿರ್ವಹಣಾಧಿಕಾರಿ** | **ನಿರ್ದೇಶಕರು** | **ನಿರ್ದೇಶಕರು** | **ಅಧ್ಯಕ್ಷರು** |

# ಮಡಂತ್ಯಾರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.)

ಅಂಚೆ: ಮಡಂತ್ಯಾರು, ಬೆಳ್ತಂಗಡಿ ಪಿನ್– 574 224

## ದಿನಾಂಕ 01–04–2024 ರಿಂದ 31–03–2025ರ ವರೆಗಿನ ವ್ಯಾಪಾರ ತಃಖ್ತೆ

| ಖರೀದಿ ವಿವರ | | ಮೊಬಲಗು | ಮಾರಾಟ ವಿವರ | | ಮೊಬಲಗು |
|---|---|---|---|---|---|
| **1. ಆರಂಭದ ದಾಸ್ತಾನು** | | 120726.66 | **1. ಮಾರಾಟ ಖಾತೆ** | | |
| 2. ಖರೀದಿ ಖಾತೆ | | | ನ್ಯಾನೊ ಗಮ್ ಮಾರಾಟ | 259.66 | |
| ಗೊಬ್ಬರ ಖರೀದಿ | 3647297.14 | | ಸುಣ್ಣ ಮಾರಾಟ | 9771.98 | |
| ಸುಣ್ಣ ಖರೀದಿ | 6500.00 | 3653797.14 | ಗೊಬ್ಬರ ಮಾರಾಟ | 2720369.28 | |
| **3. ಮಾರಾಟ ವೆಚ್ಚಗಳು** | | | ಕೀಟನಾಶಕ ಮಾರಾಟ | 111111.94 | 2841512.86 |
| ಪರವಾನಿಗೆ ಶುಲ್ಕ | 10075.00 | | **2. ಮಾರಾಟ ಆದಾಯಗಳು** | | |
| ಸಾಗಾಟ ಮತ್ತು ಕೂಲಿ | 192483.00 | 202558.00 | ಖಾಲಿ ಗೋಣಿ ಚೀಲ ಮಾರಾಟ | 161347.74 | |
| **4. ಮಾರಾಟದಿಂದ ಲಾಭ** | | 684124.14 | ಪಡಿತರ ಮಾರಾಟ ಕಮೀಷನ್ | 563927.36 | 725275.10 |
| | | | **3. ಮಾರಾಟ ವೆಚ್ಚಗಳು** | | |
| | | | ಸಾಗಾಟ ಮತ್ತು ಕೂಲಿ | | 2476.14 |
| | | | **4. ಅಂತಿಮ ಸರಕು ದಾಸ್ತಾನು** | | |
| | | | ಅಖೈರು ದಾಸ್ತಾನು (ಪ್ರಧಾನ ಕಚೇರಿ) | | 1091941.84 |
| **ಒಟ್ಟು ಜುಮ್ಲಾ** | | **4661205.94** | **ಒಟ್ಟು ಜುಮ್ಲಾ** | | **4661205.94** |

| ಸಹಿ/– | ಸಹಿ/– | ಸಹಿ/– | ಸಹಿ/– |
|---|---|---|---|
| **ಮುಖ್ಯ ಕಾರ್ಯನಿರ್ವಹಣಾಧಿಕಾರಿ** | **ನಿರ್ದೇಶಕರು** | **ನಿರ್ದೇಶಕರು** | **ಅಧ್ಯಕ್ಷರು** |

## ಮಡಂತ್ಯಾರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.)

ಅಂಚೆ: ಮಡಂತ್ಯಾರು, ಬೆಳ್ತಂಗಡಿ ಪಿನ್– 574 224

### ದಿನಾಂಕ 01–04–2024 ರಿಂದ 31–03–2025ರ ವರೆಗಿನ ಲಾಭ–ನಷ್ಟ ತಃಖ್ತೆ

| ನಷ್ಟದ ವಿವರಗಳು | | ಮೊಬಲಗು | ಲಾಭದ ವಿವರಗಳು | | ಮೊಬಲಗು |
|---|---|---|---|---|---|
| 1. ಬಡ್ಡಿ ಖರ್ಚು | | | 1. ಮಾರಾಟ ಲಾಭ | | 684124.14 |
| ಬಡ್ಡಿ (ಖರ್ಚು) | 61196635.00 | | 2. ಬಡ್ಡಿ ಆದಾಯ | | |
| ಕೂಡಿಸು: ಪ್ರಸ್ತುತ ಕೊಡಲು ಬಾಕಿ | 31533321.00 | | ಆದಾಯ ತೆರಿಗೆ ಮರುಪಾವತಿಯ ಬಡ್ಡಿ | 558757.00 | |
| ಕಳೆ: ಹಿಂದಿನ ವರ್ಷ ಕಾದಿರಿಸಿದ್ದು | –25888080.00 | | ಬಡ್ಡಿ (ಸದಸ್ಯರ ಸಾಲದಿಂದ) | 79565555.76 | |
| ಜಿಲ್ಲಾ ಬ್ಯಾಂಕ್ ಸಾಲದ ಮೇಲಿನ ಬಡ್ಡಿ | 11169636.26 | 78011512.26 | ಹೂಡಿಕೆಗಳ ಮೇಲಿನ ಬಡ್ಡಿ | 27198615.00 | 107322927.76 |
| 2. ಸಿಬ್ಬಂದಿ ಖರ್ಚು | | | 3. ಇತರ ಆದಾಯಗಳು | | |
| ಸಿಬ್ಬಂದಿ ವೇತನ | | 6511100.00 | ಸುರಕ್ಷಿತ ಲಾಕರ್‌ನ ಬಾಡಿಗೆ | 47700.00 | |
| 3. ಇತರ ಆದಾಯ ಮತ್ತು ಖರ್ಚು | | | ಸ್ಮರಣ ಸಂಚಿಕೆ ಆದಾಯ ಮತ್ತು ಖರ್ಚು | 200000.00 | |
| ವೃತ್ತಿ ತೆರಿಗೆ (ಸಂಸ್ಥೆ) | 2500.00 | | ಟಿ.ಡಿ.ಎಸ್ ಬಾಬ್ತು ಕಾದಿರಿಸಿದ್ದು | 23207.00 | |
| ದೂರವಾಣಿ ಬಿಲ್ಲು | 62339.00 | | ಗ್ರಾಚ್ಯುವಿಟಿ ವಿಮೆ | 1216446.00 | |
| ಆದಾಯ ತೆರಿಗೆ ಲೆಕ್ಕಪರಿಶೋಧಕರ ಫೀಸು | 25000.00 | | ರಿಜಿಸ್ತ್ರಿ ನೋಟೀಸು (ಆದಾಯ) | 6762.00 | |
| ವಾರ್ಷಿಕ ನಿರ್ವಹಣಾ ವೆಚ್ಚ | 108001.00 | | ಇತರ | 2042498.48 | |
| ನೀರು ಸರಬರಾಜು ಬಿಲ್ಲು | 480.00 | | ರಿಯಾಯಿತಿ | 2000.49 | 3538613.97 |
| ದಿನಗೂಲಿ (ಕಂಪ್ಯೂಟರ್) | 160500.00 | | 4. ಇತರ ಆದಾಯ ಮತ್ತು ಖರ್ಚು | | |
| ಪ್ರಯಾಣ ಭತ್ಯೆ (ನಿರ್ದೇಶಕರು) | 4960.00 | | ಜೆರಾಕ್ಸ್ ಆದಾಯ | 4011.22 | |
| ಜೆರಾಕ್ಸ್ ಆದಾಯ | 2700.00 | | 9 ಮತ್ತು 11 ಬಿ ಯಲ್ಲಿ ಸಾಲದ ಋಣ ದಾಖಲು | 19700.00 | |
| ಜಿ.ಎಸ್.ಟಿ. ಅಪ್ಲೋಡಿಂಗ್ ಚಾರ್ಜ್ | 18000.00 | | ಪ್ರವೇಶ ಧನ | 2630.00 | |
| ಅತಿಥಿ ಸತ್ಕಾರ, ಆತಿಥ್ಯ ಇತ್ಯಾದಿ | 84730.00 | | ಗೋದಾಮು ಬಾಡಿಗೆ | 752965.00 | |
| 9 ಮತ್ತು 11 ಬಿ ಯಲ್ಲಿ ಸಾಲದ ಋಣ ದಾಖಲು | 17850.00 | | ಪಾಲು ಹಾಸಲು | 194616.00 | |
| ಅನರ್ಹ ಇನ್ ಪುಟ್ ತೆರಿಗೆ (ಜಿ.ಎಸ್.ಟಿ.) | 246136.46 | | ಪುಸ್ತಕ ಮತ್ತು ಫಾರ್ಮ್ಸ್ | 608723.00 | |
| ನೂತನ ಕಟ್ಟಡ ಉದ್ಘಾಟನೆ ಖರ್ಚು | 1917100.5 | | ದಾವಾ ದಾಖಾಲು (ಆದಾಯ) | 28227.00 | |
| ರಿಪೇರಿ ಮತ್ತು ನಿರ್ವಹಣೆ | 86130.44 | | ನೋಟೀಸು ಚಾರ್ಜು | 15295.00 | 1626167.22 |

| | | | | | |
|---|---|---|---|---|---|
| ಕಮೀಷನ್ | 1819384.00 | | 5. ಕಾದಿರಿಸಿದ ಬಾಬ್ತುಗಳು | | |
| ಕಂಪ್ಯೂಟರ್ ಸೇವಾ ಖರ್ಚು | 57545.20 | | ಎಮ್.ಕೆ.ಸಿ.ಸಿ ಸಾಲದ 2022–23 ಸಾಲಿನ ಬಡ್ಡಿ | 2037770.00 | |
| ವಕೀಲರ ಫೀಸು | 65000.00 | | ಸರ್ಕಾರದ ಬಡ್ಡಿ 2022–23ನೇ ಸಾಲಿನ ಬಡ್ಡಿ | 2385173.00 | 4422943.00 |
| ಪುಸ್ತಕ ಮತ್ತು ಫಾರ್ಮ್ಸ್ | 236764.54 | | | | |
| ಜಾಹೀರಾತು ಖರ್ಚು | 323358.90 | | | | |
| ಬ್ಯಾಂಕಿನ ವಿಮೆ | 216567.00 | | | | |
| ನೋಟೀಸು ಚಾರ್ಜು | 1895.00 | | | | |
| ಚುನಾವಣೆ ಖರ್ಚು ಮತ್ತು ಆದಾಯ | 579735.56 | | | | |
| ವಿದ್ಯುತ್ ಶುಲ್ಕ | 267300.00 | | | | |
| ಮಹಾಸಭೆ ಖರ್ಚು | 958821.24 | | | | |
| ಜನರೇಟರ್ ಖರ್ಚು | 51857.82 | | | | |
| ಗೋದಾಮು ರಿಪೇರಿ | 47100.00 | | | | |
| ಕಟ್ಟಡ ತೆರಿಗೆ | 31204.00 | | | | |
| ಮೀಟಿಂಗ್ ಖರ್ಚು | 147382.00 | | | | |
| ವಾರ್ತಾ ಪತ್ರಿಕೆ | 9585.00 | | | | |
| ಇತರ ಖರ್ಚು | 449154.33 | | | | |
| ಟಪ್ಪಾಲು ಖರ್ಚು | 2820.00 | | | | |
| ಸಿಬ್ಬಂದಿ ಗ್ರಾಚ್ಯುವಿಟಿ ವಿಮೆ | 164205.00 | | | | |
| ಲೇಖನ ಸಾಮಗ್ರಿಗಳು | 11933.00 | | | | |
| ಪ್ರಯಾಣ ಭತ್ಯೆ (ಸಿಬ್ಬಂದಿ) | 6570.00 | 8184609.99 | | | |
| 4. ಲೆಕ್ಕಪರಿಶೋಧನಾ ಶುಲ್ಕ | | | | | |
| ಆಡಿಟ್ ಖರ್ಚು | 250000.00 | | | | |

| | | | | | |
|---|---|---|---|---|---|
| ಕೂಡಿಸು: ಪ್ರಸ್ತುತ ಕೊಡಲು ಬಾಕಿ | 299481.00 | | | | |
| ಕಳೆ: ಹಿಂದಿನ ವರ್ಷ ಕಾದಿರಿಸಿದ್ದು | –250000.00 | 299481.00 | | | |
| 5. ಸವಕಳಿ ಖಾತೆ | | | | | |
| ಗಣಕೀಕರಣಕ್ಕಾಗಿ | 155958.00 | | | | |
| ಸವಕಳಿ ಪೀಠೋಪಕರಣಗಳಿಗೆ | 134127.00 | | | | |
| ಯಂತ್ರೋಪಕರಣಗಳಿಗೆ | 153114.00 | | | | |
| ಪುಂಜಾಲಕಟ್ಟೆ ಕಟ್ಟಡ ಖರ್ಚು | 82617.00 | | | | |
| ಪುಂಜಾಲಕಟ್ಟೆ ಕಟ್ಟಡ ವಿಸ್ತರಣೆ | 32663.00 | | | | |
| ಪಣಕಜೆ ಶಾಖೆಯ ಜಿ.ಐ.ಮೇಲ್ ಛಾವಣಿ | 26564.00 | | | | |
| ಪುಂಜಾಲಕಟ್ಟೆ ಶಾಖೆಯ ಜಿ.ಐ.ಮೇಲ್ ಛಾವಣಿ | 15589.00 | | | | |
| "ಪರಿಶ್ರಮ" ಕಟ್ಟಡದ ಸವಕಳಿ | 1131317.00 | 1731949.00 | | | |
| 6. ಕಾದಿರಿಸಿದ ಬಾಬ್ತುಗಳು | | | | | |
| ದ.ಕ. ಜಿಲ್ಲಾ ಬ್ಯಾಂಕಿನ ಸಾಲದ ಬಡ್ಡಿ ಪಾವತಿಗೆ | 690544.00 | | | | |
| ಎಮ್.ಕೆ.ಸಿ.ಸಿ. ಸಾಲದ ಬಡ್ಡಿ 2023–24ನೇ ಸಾಲಿನ ಬಡ್ಡಿ | 2184539.00 | | | | |
| ಮಧ್ಯಮಾವಧಿ ಸಾಲದ 2023–24 ಬಡ್ಡಿ ಬಾಕಿ | 3700098.00 | | | | |
| ವಿದ್ಯುತ್ ಬಿಲ್ ಪಾವತಿ (ಮಾರ್ಚ್ 2025) | 20472.00 | 6595653.00 | | | |
| 7. ಆದಾಯ ತೆರಿಗೆ | | 4714.00 | | | |
| 8. ನಿವ್ವಳ ಲಾಭ | | 16255756.84 | | | |
| **ಒಟ್ಟು ಜುಮ್ಲಾ** | | **117594776.09** | **ಒಟ್ಟು ಜುಮ್ಲಾ** | | **117594776.09** |

| | | | |
|---|---|---|---|
| ಸಹಿ/– | ಸಹಿ/– | ಸಹಿ/– | ಸಹಿ/– |
| **ಮುಖ್ಯ ಕಾರ್ಯನಿರ್ವಹಣಾಧಿಕಾರಿ** | **ನಿರ್ದೇಶಕರು** | **ನಿರ್ದೇಶಕರು** | **ಅಧ್ಯಕ್ಷರು** |

# ಮಡಂತ್ಯಾರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.)

ಅಂಚೆ: ಮಡಂತ್ಯಾರು, ಬೆಳ್ತಂಗಡಿ ಪಿನ್– 574 224

## ದಿನಾಂಕ 31–03–2025ಕ್ಕೆ ಇದ್ದಂತೆ ಆಸ್ತಿ– ಜವಾಬ್ದಾರಿ ತಃಖ್ತೆ

| ಜವಾಬ್ದಾರಿಗಳು | ಮೊಬಲಗು | ಆಸ್ತಿಗಳು | ಮೊಬಲಗು |
|---|---|---|---|
| 1. ಪಾಲು ಬಂಡವಾಳ | 41993035.00 | 1. ಆರಂಭ/ಅಂತಿಮ ನಗದು ಶಿಲ್ಕು | 5342039.40 |
| 2. ಕ್ಷೇಮ ನಿಧಿ | 37457141.42 | 2. ಬ್ಯಾಂಕು ಖಾತೆ | 32290759.33 |
| 3. ಇತರ ನಿಧಿಗಳು | 49695200.70 | 3. ದ.ಕ.ಜಿ.ಕೇ.ಸ.ಬ್ಯಾಂಕಿನಲ್ಲಿ ಇತರ ಹೂಡಿಕೆಗಳು | 33139652.42 |
| 4. ಸವಕಳಿ ನಿಧಿ | 8526501.07 | 4. ಹೂಡಿಕೆಗಳು | 314778511.33 |
| 5. ಸಹಾಯಧನಗಳು | 1147257.00 | 5. ಶೇರುಗಳಲ್ಲಿ ಹೂಡಿಕೆಗಳು | 8603500.00 |
| 6. ಠೇವಣಾತಿಗಳು | 911479266.05 | 6. ಇತರ ಆಸ್ತಿ | 32490.00 |
| 7. ಸಿಬ್ಬಂದಿ ಠೇವಣಾತಿಗಳು | 2663511.00 | 7. ಸಾಲಗಳು | 883670062.00 |
| 8. ಇತರ ಸಲ್ಲ ತಕ್ಕ ಬಾಬ್ತುಗಳು | 5112620.89 | 8. ಅಮಾನತು ಮೂಲ (ಬರತಕ್ಕದ್ದು) | 69302316.78 |
| 9. ಪಡೆದ ಸಾಲಗಳು(ದ.ಕ.ಜಿ.ಕೇ.ಸ.ಬ್ಯಾಂಕಿನಿಂದ) | 202971000.00 | 9. ಸ್ಥಿರ ಚರ ಸೊತ್ತುಗಳು | 27162759.75 |
| 10. ಖಾದಿರಿಸುವಿಕೆ | 103757156.00 | 10. ಚರ ಆಸ್ತಿ | 5804171.12 |
| 11. ಡ್ಯೂಟಿ ಮತು ತೆರಿಗೆ | 159758.00 | 11. ಅಂತಿಮ ಸರಕು ದಾಸ್ತಾನು | 1091941.84 |
| 12. ನಿವ್ವಳ ಲಾಭ | 16255756.84 | | |
| **ಒಟ್ಟು ಜುಮ್ಲಾ** | **1381218203.97** | **ಒಟ್ಟು ಜುಮ್ಲಾ** | **1381218203.97** |

ಸಹಿ/– **ಮುಖ್ಯ ಕಾರ್ಯನಿರ್ವಹಣಾಧಿಕಾರಿ**

ಸಹಿ/– **ನಿರ್ದೇಶಕರು**

ಸಹಿ/– **ನಿರ್ದೇಶಕರು**

ಸಹಿ/– **ಅಧ್ಯಕ್ಷರು**

### ಲೆಕ್ಕಪರಿಶೋಧನಾ ದೃಢೀಕರಣ ಪತ್ರ

ನಾನು ಮಡಂತ್ಯಾರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ತಾ: ದ.ಕ. ಜಿಲ್ಲೆ ಇದರ 2024–2025ನೇ ಸಾಲಿನ ಲೆಕ್ಕಪರಿಶೋಧನೆ ನಡೆಸಿರುತ್ತೇನೆ. ನನ್ನ ಅತ್ಯುತ್ತಮ ಜ್ಞಾನ ಮತ್ತು ತಿಳುವಳಿಕೆಯಂತೆ ಲೆಕ್ಕಪರಿಶೋಧನೆಗೆ ಅಗತ್ಯವಾದ ಎಲ್ಲಾ ಮಾಹಿತಿ ಹಾಗೂ ವಿವರಣೆಯನ್ನು ಪಡೆದಿರುತ್ತೇನೆ ಮತ್ತು ಅದು ತೃಪ್ತಿಕರವೆಂದು ಕಂಡುಬರುತ್ತದೆ. ನನ್ನ ಅಭಿಪ್ರಾಯದಂತೆ ಹಾಗೂ ನನಗೆ ದೊರೆತ ಮಾಹಿತಿ ಮತ್ತು ವಿವರಣೆಯಂತೆ ಹಾಗೂ ಲಗತ್ತಿಸಿರುವ ನನ್ನ ವಿವರವಾದ ಲೆಕ್ಕಪರಿಶೋಧನಾ ವರದಿಯಲ್ಲಿ ತಿಳಿಸಿರುವುದಕ್ಕೆ ಒಳಪಟ್ಟು ವರದಿಯಲ್ಲಿ ಚರ್ಚಿಸಿರುವ ಸಂಘದ ಲಾಭ–ನಷ್ಟದ ಲೆಕ್ಕ ಹಾಗೂ ಆಸ್ತಿ–ಜವಾಬ್ದಾರಿ ತಃಖ್ತೆ ದಿನಾಂಕ 31–03–2025ರಲ್ಲಿದಂತೆ ನಿಜ ಹಾಗೂ ಸಮಂಜಸವಾದ ಆರ್ಥಿಕ ಸ್ಥಿತಿಯನ್ನು ತೋರಿಸುತ್ತದೆ ಎಂದು ದೃಢೀಕರಿಸುತ್ತೇನೆ.

ಸಹಿ/–

**ಪರಿಶೀಲಿಸಿದೆ**
**ಮೆ. ಐ.ವಿ. ಶರ್ಮಾ ಆಂಡ್ ಕಂಪೆನಿ**
**ಸನ್ನದು ಲೆಕ್ಕಪರಿಶೋಧಕರು ಪರವಾಗಿ**
**ಸಿ.ಐ.ವಿ. ಶರ್ಮಾ**
**ಪಾಲುದಾರರು**
**ಮೆ.ನಂ:018845**

**ಸ್ಥಳ: ಮಂಗಳೂರು**

**ದಿನಾಂಕ: 02–06–2025**

# ಮಡಂತ್ಯಾರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.)

ಅಂಚೆ: ಮಡಂತ್ಯಾರು, ಬೆಳ್ತಂಗಡಿ ಪಿನ್ – 574 224

## 2025–26ನೇ ವರ್ಷದ ಸಂಘದ ಅಂದಾಜು ಬಜೆಟ್

| ಆಯ | 2024 – 25 ನಿಜವಾದ ಆಯ ರೂ. | 2025 – 26 ಅಂದಾಜು ಆಯ ರೂ. | ವ್ಯಯ | 2024 – 25 ನಿಜವಾದ ವ್ಯಯ ರೂ. | 2025– 26 ಅಂದಾಜು ವ್ಯಯ ರೂ. |
|---|---|---|---|---|---|
| 1.ಸಾಲದ ಬಡ್ಡಿ | 79565556.00 | 90000000.00 | 1.ಬಡ್ಡಿ ಸಂದಮ್ದು | 66841876.00 | 80000000.00 |
| 2.ಹೂಡಿಕೆಗಳ ಮೇಲಿನ ಬಡ್ಡಿ | 28295987.00 | 26000000.00 | 2.ಜಿಲ್ಲಾ ಬ್ಯಾಂಕ್ ಸಾಲದ ಮೇಲಿನ ಬಡ್ಡಿ | 11169636.00 | 18000000.00 |
| 3.ಇತರ ಅದಾಯ | 3922128.00 | 4500000.00 | 3.ದೂರವಾಣಿ ಬಿಲ್ಲು | 62339.00 | 100000.00 |
| 4.ವ್ಯಾಪಾರದಿಂದ ಅದಾಯ | 683850.00 | 750000.00 | 4.ಕಮೀಷನ್ (ದೈನಿಕ) | 1819384.00 | 2200000.00 |
| | | | 5.ದಿನಕೂಲಿ (ಕಂಪ್ಯೂಟರ್) | 160500.00 | 200000.00 |
| | | | 6.ಆದಾಯ ತೆರಿಗೆ | | 600000.00 |
| | | | 7.ಜಾಹೀರಾತು ಖರ್ಚು | 323359.00 | 350000.00 |
| | | | 8.ಬ್ಯಾಂಕಿನ ವಿಮೆ | 216567.00 | 350000.00 |
| | | | 9.ಪುಸ್ತಕ ಫಾರ್ಮು | 236765.00 | 300000.00 |
| | | | 10.ವಿದ್ಯುತ್ ಶುಲ್ಕ | 267300.00 | 350000.00 |
| | | | 11.ಮಹಾಸಭೆ ಖರ್ಚು | 958821.00 | 700000.00 |
| | | | 12.ಜನರೇಟರ್ ಖರ್ಚು | 51858.00 | 150000.00 |
| | | | 13.ಗೋದಾಮು ರಿಪೇರಿ | 47100.00 | 97500.00 |
| | | | 14.ಕಟ್ಟಡ ತೆರಿಗೆ | 31204.00 | 50000.00 |
| | | | 15.ಮೀಟಿಂಗ್ ಖರ್ಚು | 147382.00 | 250000.00 |
| | | | 16.ವಾರ್ತಾ ಪತ್ರಿಕೆ | 9585.00 | 15000.00 |
| | | | 17.ಸಿಬ್ಬಂದಿ ನಿವೃತ್ತಿ ರಜಾ ಸಂಬಳ | | 1000000.00 |

| | | | | | |
|---|---|---|---|---|---|
| | | | 18.ಸಿಬ್ಬಂದಿ ಗ್ರಾಚುವಿಟಿ ವಿಮೆ | 164205.00 | 300000.00 |
| | | | 19.ಲೇಖನ ಸಾಮಗ್ರಿ | 11933.00 | 20000.00 |
| | | | 20.ಪ್ರಯಾಣ ಭತ್ತೆ (ಸಿಬ್ಬಂದಿ) | 6570.00 | 10000.00 |
| | | | 21. ಪ್ರಯಾಣ ಭತ್ತೆ (ನಿರ್ದೇಶಕರು) | 4960.00 | 10000.00 |
| | | | 22. ಆಂತರಿಕ ಲೆಕ್ಕಪರಿಶೋಧನೆ | | 200000.00 |
| | | | 23. ಸಿಬ್ಬಂದಿ ವೇತನ | 6511100.00 | 10500000.00 |
| | | | 24. ವಾರ್ಷಿಕ ನಿರ್ವಹಣಾ ವೆಚ್ಚ | 108001.00 | 200000.00 |
| | | | 25. ನೀರು ಸರಬರಾಜು | 480.00 | 5000.00 |
| | | | 26. ಕಾನೂನು ಸಲಹೆ | 65000.00 | 125000.00 |
| | | | 27. ಸಾದಿಲ್ವಾರು ಖರ್ಚು | 449154.00 | 550000.00 |
| | | | 28. ಲೆಕ್ಕಪರಿಶೋಧಕರ ಫೀಸು | 299481.00 | 350000.00 |
| | | | 29. ಟಪ್ಪಾಲು ಖರ್ಚು | 2820.00 | 5000.00 |
| | | | 30. ಕಂಪ್ಯೂಟರ್ ಸೇವಾ ಖರ್ಚು | 57545.00 | 80000.00 |
| | | | 31. ನೋಟೀಸು ಖರ್ಚು | 1895.00 | 5000.00 |
| | | | 32. ಆದಾಯ ಲೆಕ್ಕ ಪರಿಶೋಧಕರ ಫೀಸು | 25000.00 | 50000.00 |
| | | | 33. ಜಿ. ಎಸ್. ಟಿ. ಅಪ್ಲೋಡಿಂಗ್ ಚಾರ್ಜ್ | 18000.00 | 25000.00 |
| | | | 34. ವೃತ್ತಿ ತೆರಿಗೆ (ಸಂಸ್ಥೆ) | 2500.00 | 7500.00 |
| | | | 35. ಅತಿಥಿ ಸತ್ಕಾರ, ಆತಿಥ್ಯ ಇತ್ಯಾದಿ | 84730.00 | 120000.00 |
| | | | 36. ಅನರ್ಹ ಇನ್ಪುಟ್ ತೆರಿಗೆ (ಜಿ.ಎಸ್.ಟಿ.) | 246136.00 | 325000.00 |
| | | | 37. ರಿಪೇರಿ ಮತ್ತು ನಿರ್ವಹಣೆ | 86130.00 | 150000.00 |
| | | | 38. ಉಳಿತಾಯ | 16255757.00 | 3500000.00 |
| **ಜುಮ್ಲಾ** | **112467521.00** | **121250000.00** | **ಜುಮ್ಲಾ** | **106745073.00** | **121250000.00** |

## ಬೈಲಾ ತಿದ್ದುಪಡಿ

| ಉಪ ನಿಯ ಮದ ಸಂಖ್ಯೆ | ಉಪನಿಯಮದ ಪದಗಳು ಈಗ ಇರುವಂತೆ | ತಿದ್ದುಪಡಿ | ತಿದ್ದುಪಡಿಗೆ ಕಾರಣಗಳು |
|---|---|---|---|
| 15ಸಿ2 (iii) 1 | 1.ಹಿಂದಿನ 5 ವಾರ್ಷಿಕ ಮಹಾಸಭೆಗಳಲ್ಲಿ ಕನಿಷ್ಠ 3 ಸಭೆಗಳಲ್ಲಿ ಭಾಗವಹಿಸಿರತಕ್ಕದ್ದು, ಅಥವಾ<br>2.ಈ ಕೆಳಗಿನ ಯಾವುದಾದರೂ ಒಂದು ವ್ಯವಹಾರವನ್ನು ಕನಿಷ್ಠ ವ್ಯವಹಾರವೆಂದು ಪರಿಗಣಿಸಬಹುದು.<br>ಅ) ವರ್ಷದಲ್ಲಿ ಕನಿಷ್ಠ ರೂ.5000/ ಕೃಷಿ/ಕೃಷಿಯೇತರ ಸಾಲ ಪಡೆದು ಮರುಪಾತಿಸುವುದು.<br>ಆ) ಕನಿಷ್ಠ ಠೇವಣಿ ರೂ.5000/– ನ್ನು ಒಂದು ವರ್ಷದ ಅವಧಿಗೆ ಹೂಡಿರಬೇಕು (SB ಅಥವಾ FD)<br>ಇ). ಕನಿಷ್ಠ ವರ್ಷದಲ್ಲಿ ರೂ. 2,000/– ಮೊತ್ತದ ಗೊಬ್ಬರ, ಕೀಟನಾಶಕ ಖರೀದಿ ಮಾಡಿರಬೇಕು. | ಕ.ಸ.ಸಂ.ಗಳ ಅಧಿನಿಯಮ 1959 27 (ಎ) ರಂತೆ ಸಂಘದ ಸದಸ್ಯರು ವ್ಯವಸ್ಥಾಪನೆಯಲ್ಲಿ ಭಾಗವಹಿಸುವುದು.<br><br>1.ಹಿಂದಿನ 5 ವಾರ್ಷಿಕ ಮಹಾಸಭೆಗಳಲ್ಲಿ ಕನಿಷ್ಠ 2 ಸಭೆಗಳಲ್ಲಿ ಭಾಗವಹಿಸಿರತಕ್ಕದ್ದು,<br>ಮತ್ತು<br>ಹಿಂದಿನ 5 ಸಹಕಾರಿ ವರ್ಷಗಳ ಪೈಕಿ ಯಾವುದೇ 2 ಸಹಕಾರಿ ವರ್ಷಗಳಲ್ಲಿ ಈ ಕೆಳಗೆ ನಮೂದಿಸಿದ ಯಾವುದಾದರೊಂದು ಕನಿಷ್ಠ ವ್ಯವಹಾರವನ್ನು ಮಾಡಿರಬೇಕು.<br>ಅ) ವರ್ಷದಲ್ಲಿ ಕನಿಷ್ಠ ರೂ.5000/ ಕೃಷಿ/ಕೃಷಿಯೇತರ ಸಾಲ ಪಡೆದು ಮರುಪಾತಿಸುವುದು.<br>ಆ) ಕನಿಷ್ಠ ಠೇವಣಿ ರೂ.5000/– ನ್ನು ಹೂಡಿರಬೇಕು (SB ಅಥವಾ FD) | ಸಹಕಾರಿ ಕಾಯ್ದೆ ತಿದ್ದುಪಡಿ ಯಂತೆ |
| 66 | ಸದಸ್ಯನು ಸಾಲವನ್ನು ಪಡೆಯುವ ಕೃಷಿ ಸಾಲದ ಮೊಬಲಗಿನ ಶೇ.10 ಷೇರುಗಳನ್ನು, ಉಳಿದ ಸಾಲಗಳಿಗೆ ಸಾಲಗಳ ಒಳನಿಯಮಗಳ ಪ್ರಕಾರ ಷೇರನ್ನು ಪಡೆದಿರಬೇಕು. ಸಾಲಗಳ ಮೇಲೆ ಷೇರು ಜೋಡಣೆ ಹೊಂದಿರಬೇಕೆಂಬ ಈ ಶರ್ತ ನಾಮಮಾತ್ರ ಸದಸ್ಯರಿಗೆ ಅನ್ವಯಿಸುವುದಿಲ್ಲ. | ಸದಸ್ಯನು ಸಾಲವನ್ನು ಪಡೆಯುವ ಅಲ್ಪಾವಧಿ ಕೃಷಿ ಸಾಲದ ಮೊಬಲಗಿನ ಶೇ.5 ಷೇರುಗಳನ್ನು, ಉಳಿದ ಸಾಲಗಳಿಗೆ ಸಾಲಗಳ ಒಳನಿಯಮಗಳ ಪ್ರಕಾರ ಷೇರನ್ನು ಪಡೆದಿರಬೇಕು. ಸಾಲಗಳ ಮೇಲೆ ಷೇರು ಜೋಡಣೆ ಹೊಂದಿರಬೇಕೆಂಬ ಈ ಶರ್ತ ನಾಮಮಾತ್ರ ಸದಸ್ಯರಿಗೆ ಅನ್ವಯಿಸುವುದಿಲ್ಲ. | ಸದಸ್ಯರ ಅನುಕೂಲ ಕ್ಕಾಗಿ |
| 57.1 | ಆಭರಣ ಈಡು ಸಾಲ, ಉತ್ಪತ್ತಿ ಈಡು ಸಾಲ, ವಾಹನ ಖರೀದಿ ಸಾಲ, ಹೊರತುಪಡಿಸಿ ಪ್ರತಿ ಸದಸ್ಯರಿಗೆ ನೀಡಬಹುದಾದ ಉಳಿದ ಎಲ್ಲಾ ರೀತಿಯ ಸಾಲಗಳ ಗರಿಷ್ಠ ಮಿತಿ ರೂ.50,00,000/– ಆಗಿದ್ದು, ಅಗತ್ಯವಿದ್ದಲ್ಲಿ ಹೆಚ್ಚುವರಿಯಾಗಿ ಸಂಘದ ಸಂಪನ್ಮೂಲಗಳನ್ನು ಆದರಿಸಿ ನಿರ್ದೇಶಕ ಮಂಡಳಿಯವರು ಕಾಲಕಾಲಕ್ಕೆ ನಿಗದಿಪಡಿಸಬಹುದು. ಈ ಎಲ್ಲಾ ರೀತಿಯ ಸಾಲಗಳಿಗೂ ಪ್ರತ್ಯೇಕ ಸಾಲದ ಒಳನಿಯಮಗಳನ್ನು ರಚಿಸಿಕೊಂಡು ನಬಾರ್ಡ್, ಆರ್ ಬಿ ಐ ಮತ್ತು ಹಣಕಾಸು ಪೂರೈಸುವ ಬ್ಯಾಂಕ್ ಹೊರಡಿಸುವ ಮಾರ್ಗಸೂಚಿಯನ್ವಯ ತಯಾರಿಸಿಕೊಳ್ಳುವುದು. | ಆಭರಣ ಈಡು ಸಾಲ, ಉತ್ಪತ್ತಿ ಈಡು ಸಾಲ, ವಾಹನ ಖರೀದಿ ಸಾಲ, ಹೊರತುಪಡಿಸಿ ಪ್ರತಿ ಸದಸ್ಯರಿಗೆ ನೀಡಬಹುದಾದ ಉಳಿದ ಎಲ್ಲಾ ರೀತಿಯ ಸಾಲಗಳ ಗರಿಷ್ಠ ಮಿತಿ ರೂ. 75,00,000/– (ರೂ. ಎಪ್ಪತ್ತೈದು ಲಕ್ಷ ಮಾತ್ರ) ಆಗಿದ್ದು, ಅಗತ್ಯವಿದ್ದಲ್ಲಿ ಹೆಚ್ಚುವರಿಯಾಗಿ ಸಂಘದ ಸಂಪನ್ಮೂಲಗಳನ್ನು ಆದರಿಸಿ ನಿರ್ದೇಶಕ ಮಂಡಳಿಯವರು ಕಾಲಕಾಲಕ್ಕೆ ನಿಗದಿಪಡಿಸಬಹುದು. ಈ ಎಲ್ಲಾ ರೀತಿಯ ಸಾಲಗಳಿಗೂ ಪ್ರತ್ಯೇಕ ಸಾಲದ ಒಳನಿಯಮಗಳನ್ನು ರಚಿಸಿಕೊಂಡು ನಬಾರ್ಡ್, ಆರ್ ಬಿ ಐ ಮತ್ತು ಹಣಕಾಸು ಪೂರೈಸುವ ಬ್ಯಾಂಕ್ ಹೊರಡಿಸುವ ಮಾರ್ಗ ಸೂಚಿಯನ್ವಯ ತಯಾರಿಸಿಕೊಳ್ಳುವುದು. | ಸಾಲದ ಬೇಡಿಕೆ ಹೆಚ್ಚಿರುವು ದರಿಂದ |

## ವಿಶೇಷ ಸೂಚನೆ:

1. **ಮಹಾಸಭೆಯಲ್ಲಿ ಸಂಘದ ಯಾವುದಾದರೊಂದು ವಿಷಯ ಪ್ರಸ್ತಾಪಿಸಲು ಬಯಸುವ ಸದಸ್ಯರು ಮಹಾಸಭೆಯ ಐದು ದಿನಗಳ ಮೊದಲು ಬರಹ ಮೂಲಕ ಸಂಘದ ಮುಖ್ಯಕಾರ್ಯನಿರ್ವಹಣಾಧಿಕಾರಿಯವರಿಗೆ ತಿಳಿಸಲು ವಿನಂತಿಸಿದೆ.**
2. ಮಹಾಸಭೆಗೆ ಬರುವಾಗ ವಾರ್ಷಿಕ ವರದಿ ಪುಸ್ತಕವನ್ನು ತಪ್ಪದೇ ತರಬೇಕಾಗಿ ವಿನಂತಿ.
3. ಕೇಂದ್ರ ಕಚೇರಿ ಮತ್ತು ಪಣಕಜೆ ಶಾಖೆಯ ಪಡಿತರ ವಿತರಣೆಯನ್ನು ಪಡಿತರದಾರರ ಆಶಯದಂತೆ ಬೆಳಗ್ಗೆ 9.00ರಿಂದ ರಾತ್ರಿ 8.00 ರವರೆಗೆ ನಿಗದಿತ ದಿನಾಂಕಗಳಲ್ಲಿ ವಿತರಿಸಲಾಗುತ್ತದೆ.
4. ಕೃಷಿಕರನ್ನು ಪ್ರೋತ್ಸಾಹಿಸುವ ಸಲುವಾಗಿ ಕೃಷಿ ಮತ್ತು ಕೃಷಿ ಪೂರಕ ಚಟುವಟಿಕೆಗಳಲ್ಲಿ ವಿಶೇಷ ಸಾಧನೆಗೈಯ್ಯುವ ರೈತರನ್ನು ಮತ್ತು ಮೆಟ್ರಿಕ್ ನಂತರದ ಶಿಕ್ಷಣದಲ್ಲಿ 90 ಶೇಕಡಾಕ್ಕಿಂತ ಹೆಚ್ಚು ಅಂಕ ಗಳಿಸಿರುವ ಮತ್ತು ಕ್ರೀಡೆಯಲ್ಲಿ ರಾಜ್ಯ / ರಾಷ್ಟ್ರ / ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆಗೈದಿರುವ ಸಂಘದ ಸದಸ್ಯರ ಮಕ್ಕಳನ್ನು ಪ್ರತಿಭಾ ಪುರಸ್ಕಾರ ಮತ್ತು ವಿದ್ಯಾರ್ಥಿವೇತನಗಳನ್ನು ನೀಡಿ ಮಹಾಸಭೆಯಲ್ಲಿ ಗೌರವಿಸಲಾಗುವುದು.
5. ಕ.ಸ.ಸಂ.ಗಳ ಅಧಿನಿಯಮ 1959 27(ಎ) ರಂತೆ ಸಂಘದ ಸದಸ್ಯರು ಕಳೆದ ಐದು ವಾರ್ಷಿಕ ಮಹಾಸಭೆಗಳ ಪೈಕಿ ಕನಿಷ್ಠ ಯಾವುದೇ ಎರಡು ವಾರ್ಷಿಕ ಮಹಾಸಭೆಗೆ ಹಾಜರಾಗಲು ವಿಫಲವಾದಲ್ಲಿ ಮತ್ತು ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಗಳಲ್ಲಿ ಬೈಲಾದಲ್ಲಿ ಕಾಣಿಸಿರುವ ಕನಿಷ್ಠ ಸೇವೆಗಳನ್ನು ಬಳಸಿಕೊಳ್ಳದಿದ್ದಲ್ಲಿ ಸರ್ವಸದಸ್ಯರ ಸಭೆ ಮತ್ತು ಆಡಳಿತ ಮಂಡಳಿ ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕನ್ನು ಕಳೆದುಕೊಳ್ಳುತ್ತಾರೆ.
6. 2024–25ನೇ ಸಾಲಿನಲ್ಲಿ ಯಶಸ್ವಿನಿ ಯೋಜನೆಯಲ್ಲಿ ಸೇರ್ಪಡೆಗೊಂಡಿರುವವರ 'ಕಾರ್ಡು'ಗಳನ್ನು ಕೇಂದ್ರ ಕಛೇರಿಯಿಂದ ಪಡೆದುಕೊಳ್ಳಬಹುದು.
7. ಸಂಘದಿಂದ ಕೃಷಿಯೇತರ ಸಾಲ ಪಡೆದುಕೊಳ್ಳಲು ಬಯಸುವ ಸದಸ್ಯರು ತಮ್ಮ ಜಮೀನಿನ 0.05 ಎಕ್ರೆಯಷ್ಟಾದರೂ ಸ್ಥಳವನ್ನು ಕೃಷಿಯೇತರ ಉದ್ದೇಶಕ್ಕೆ ಪರಿವರ್ತಿಸಿ ನಮೂನೆ 9 ಮತ್ತು 11ಎ ಪಡೆದುಕೊಳ್ಳುವುದು.
8. ಪಾಲು ಮುನಾಫೆ (ಡಿವಿಡೆಂಡ್) ಯನ್ನು ಪಡೆದುಕೊಳ್ಳದ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬೇಕಾಗಿ ವಿನಂತಿ. (ಬೈಲಾ ಸಂಖ್ಯೆ 14–79.7 ರಂತೆ ಡಿವಿಡೆಂಡ್ ಘೋಷಿಸಿದ ತಾರೀಖಿನಿಂದ 3 ವರ್ಷದ ಒಳಗೆ ಡಿವಿಡೆಂಡ್ ಪಡೆದುಕೊಳ್ಳದಿದ್ದಲ್ಲಿ ಆ ಮೊಬಲಗನ್ನು ಕಾಯ್ದಿಟ್ಟ ನಿಧಿಗೆ ಜಮೆ ನೀಡಲಾಗುವುದು)
9. ಸದಸ್ಯರ ಗುರುತು ಚೀಟಿ ಮತ್ತು ಪಾಲು ಪತ್ರವನ್ನು ಪಡೆಯದೆ ಇದ್ದ ಸದಸ್ಯರು ಕೇಂದ್ರ ಕಛೇರಿಯಿಂದ ಪಡೆಯಬೇಕಾಗಿ ವಿನಂತಿ.
10. ಸಂಘದಿಂದ ಕೃಷಿ ಸಾಲ ಪಡೆದುಕೊಂಡಿರುವ ರೈತ ಸದಸ್ಯರು ತಮ್ಮ ಅಡಿಕೆ ಮತ್ತು ಕಾಳುಮೆಣಸು ಕೃಷಿ ಬಗ್ಗೆ ಸರಕಾರದ ಹವಾಮಾನ ಆಧಾರಿತ ಬೆಳೆ ವಿಮೆಯ ಪ್ರಯೋಜನ ಪಡೆದುಕೊಳ್ಳಲು ಕೋರಲಾಗಿದೆ. ಸರಕಾರ ಪ್ರತಿವರ್ಷ ನಿಗದಿಪಡಿಸುವ ದಿನಗಳಲ್ಲಿ ಸಂಘದ ಕೇಂದ್ರ ಕಚೇರಿಗೆ ಭೇಟಿ ನೀಡಿ ಸಂಬಂಧಿಸಿದ ಮೊಬಲಗನ್ನು ಕಡ್ಡಾಯವಾಗಿ ಪಾವತಿಸುವುದು. ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ನೋಂದಾಯಿಸಿಕೊಳ್ಳಲು ರೈತರ ಆಧಾರ್ ಮತ್ತು ಪಹಣಿ ಫ್ರೂಟ್ಸ್ (FRUITS) ಐಡಿಯೊಂದಿಗೆ ಜೋಡಣೆಯಾಗಿದ್ದು ಹಿಂದಿನ ವರ್ಷದ ಮುಂಗಾರು ಬೆಳೆ ಸಮೀಕ್ಷೆಯು ಕಡ್ಡಾಯವಾಗಿ ಆಗಿರಬೇಕು.
11. ರೈತರು ಸಂಘದಿಂದ ಪಡೆಯುತ್ತಿರುವ ಅಲ್ಪಾವಧಿ ಮತ್ತು ಮಧ್ಯಮಾವಧಿ ಕೃಷಿ ಸಾಲಗಳಿಗೆ ಸರಕಾರವು ಕಾಲಕಾಲಕ್ಕೆ ಆದೇಶಿಸುವ ಷರತ್ತುಗಳು ಅನ್ವಯವಾಗುತ್ತವೆ.
12. **ಜಾಮೀನುದಾರರ ಜವಾಬ್ದಾರಿಗಳು :**
ಪ್ರತಿಯೊಬ್ಬ ಜಾಮೀನುದಾರರು ಸಾಲಗಾರರಷ್ಟೇ ಸಾಲಕ್ಕೆ ಜವಾಬ್ದಾರರು. ಸಾಲಗಾರರ ಸಾಲವು ಸುಸ್ತಿಯಾದಲ್ಲಿ ಜಾಮೀನುದಾರರಿಗೂ ಸಾಲ ಪಡೆಯಲು ಅರ್ಹತೆಯಿರುವುದಿಲ್ಲ. ಸಾಲಗಾರರಿಂದ ಸಾಲ ವಸೂಲಾಗದಿದ್ದಲ್ಲಿ ಜಾಮೀನುದಾರರಿಂದ ಸಾಲ ವಸೂಲು ಮಾಡುವ ಮತ್ತು ಜಾಮೀನುದಾರರ ಆಸ್ತಿಯನ್ನು ಕಾನೂನಿನಂತೆ ಮುಟ್ಟುಗೋಲು ಮಾಡಿಕೊಂಡು ಹರಾಜು ಮಾಡಬಹುದಾದ ಅಧಿಕಾರ ಸಂಘಕ್ಕೆ ಇರುತ್ತದೆ.

# ಕೇಂದ್ರ ಕಚೇರಿಯ ನೂತನ ಕಟ್ಟಡ 'ಪರಿಶ್ರಮ'ದ ಉದ್ಘಾಟನಾ ಸಮಾರಂಭದ ಕ್ಷಣಗಳು




ಪುಷ್ಪಾಲಂಕೃತ ಕಟ್ಟಡದ ಮುಂಭಾಗದ ನೋಟ



ಪಡಿತರ ವಿಭಾಗದ ಉದ್ಘಾಟನೆ ಡಾ. ಎಂ.ಎನ್.ಆರ್. ಮತ್ತು ವಂದನೀಯ ಡಾ. ಸ್ಟ್ಯಾನಿ ಗೋವಿಯಸ್‌ರಿಂದ



ಬ್ಯಾಂಕಿಂಗ್ ವಿಭಾಗದ ಉದ್ಘಾಟನೆ ಮತ್ತು ದೀಪ ಪ್ರಜ್ವಲನೆ
ಡಾ. ಎಂ.ಎನ್. ರಾಜೇಂದ್ರ ಕುಮಾರ್ ಮತ್ತು ಅರವಿಂದ್ ಜೈನ್ ಅಧ್ಯಕ್ಷರಿಂದ



ದೀಪ ಪ್ರಜ್ವಲನೆ ವಂದನೀಯ
ಡಾ. ಸ್ಟ್ಯಾನಿ ಗೋವಿಯಸ್‌ರಿಂದ

ದೀಪ ಪ್ರಜ್ವಲನೆ ಮಾಜಿ ಅಧ್ಯಕ್ಷರಾದ
ಶ್ರೀ ಎಂ. ಸಂಜೀವ ಶೆಟ್ಟಿ ಮತ್ತು
ಟಿ. ವಿ. ಶ್ರೀ ಶ್ರೀಧರ್ ರಾವ್
ಇವರಿಂದ





ದೀಪ ಪ್ರಜ್ವಲನೆ ಸಂಘದ
ನಿರ್ದೇಶಕರಿಂದ

ಡಾ. ಎಂ. ಎನ್. ರಾಜೇಂದ್ರ
ಕುಮಾರ್‌ರವರೊಂದಿಗೆ
ಸಂಘದ ಮಾಜಿ ಮತ್ತು
ಹಾಲಿ ಅಧ್ಯಕ್ಷರುಗಳು





ಸಭಾಭವನದ ಉದ್ಘಾಟನೆ



ಸಮಾರಂಭಕ್ಕೆ ಸಾಕ್ಷಿಯಾದ ಸದಸ್ಯರು




ಡಾ. ಎಂ.ಎನ್. ರಾಜೇಂದ್ರ ಕುಮಾರ್‌ರವರಿಗೆ ಗೌರವಾರ್ಪಣೆ




ಮಾಜಿ ಅಧ್ಯಕ್ಷರುಗಳಿಗೆ ಗೌರವಾರ್ಪಣೆ



ಸಮಾರಂಭದಲ್ಲಿ ಭಾಗಿಯಾದ ಸಹಕಾರಿಗಳು




ಮಾಜಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಗೌರವ




ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ. ಇದರ ನಿರ್ದೇಶಕರಾದ ಶ್ರೀ ಕುಶಾಲಪ್ಪ ಗೌಡ ಪೂವಾಜೆರವರಿಗೆ ಅಭಿನಂದನೆ




2023–24ನೇ ಸಾಲಿನ ಮಹಾಸಭೆ